ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ

ವಾರ್ತಾಪತ್ರ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೦೧
ಸಂಚಿಕೆ : ೦೩

೩

(ಖಾಸಗಿ ಪ್ರಸಾರಕ್ಕಾಗಿ ಮಾತ್ರ)

ಜುಲೈ–ಸೆಪ್ಟೆಂಬರ್ ೨೦೦೭

ಸಂಪಾದಕರು
ಎಸ್.ವಿ. ಶ್ರೀನಿವಾಸರಾವ್

ಪರಿವಿಡಿ

ವಿಳಾಸ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬಿ.ಎಂ.ಶ್ರೀ. ಕಲಾಭವನ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು – ೧೯
ದೂರವಾಣಿ : ೨೬೬೧೫೮೭೭

ಶಾಖೆ

ಬಿ.ಎಂ.ಶ್ರೀ. ಶತಮಾನೋತ್ಸವ ಭವನ
ಬೆಳ್ಳೂರು, ನಾಗಮಂಗಲ ತಾ॥
ಮಂಡ್ಯ ಜಿಲ್ಲೆ



ಎಂ.ವಿ.ಸೀ. ಪ್ರತಿಮೆಗೆ ಮಾಲಾರ್ಪಣೆ ಕಾರ್ಯಕ್ರಮದಲ್ಲಿ
ಬಿ.ಎಂ.ಶ್ರೀ. ಅವರ ಪ್ರತಿಮೆಗೆ ಮಾಲಾರ್ಪಣೆ – ೯–೯–೨೦೦೭




'ಸಿರಿಸಂಗೀತ' ಕಾರ್ಯಕ್ರಮ ನಡೆಸಿಕೊಟ್ಟ ವಿದುಷಿ ಎಸ್. ಸರೋಜ ಶಿವಲಿಂಗಮ್ ಮತ್ತು ಸಂಗಡಿಗರು


ಸಂಪಾದಕೀಯ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಸ್ಥಾಪನೆಗೊಂಡ ೨೮ ವರ್ಷಗಳಲ್ಲಿ ತನ್ನ ಕಾರ್ಯವ್ಯಾಪ್ತಿಯನ್ನು ಗಣನೀಯವಾಗಿ ಹಿಗ್ಗಿಸಿಕೊಂಡಿರುವುದಲ್ಲದೆ ಗಾತ್ರದಲ್ಲೂ ಸಾಕಷ್ಟು ಬೆಳೆದಿದೆ. ಸ್ಥಾಪಕ ಎಂ.ವಿ.ಸೀ. ಅವರ ಮನೆಯಲ್ಲಿ ಪ್ರಾರಂಭಗೊಂಡ ಈ ಪ್ರತಿಷ್ಠಾನ ಈಗ ಮೂರು ಅಂತಸ್ತಿನ ಭವ್ಯ ಕಟ್ಟಡ 'ಬಿ.ಎಂ.ಶ್ರೀ ಕಲಾಭವನ'ದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಬೆಳ್ಳೂರಿನತ್ತಲೂ ಕೈಚಾಚಿ, ಅಲ್ಲೂ ಬಿ.ಎಂ.ಶ್ರೀ. ಶತಮಾನೋತ್ಸವ ಭವನ ಹೊಂದಿದೆ. ಬಿ.ಎಂ.ಶ್ರೀ. ಅವರ ಹುಟ್ಟೂರಾದ 'ಸಂಪಿಗೆ'ಯಲ್ಲೂ ಅಡಿ ಇರಿಸಿ, ನೆಲೆಯೂರಿ ಅವರ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತೆ ಕಾರ್ಯಯೋಜನೆ ತಯಾರಿಸಿದೆ. ಪ್ರಸ್ತುತ ಪ್ರತಿಷ್ಠಾನವು ಸಾಹಿತ್ಯ, ಸಂಸ್ಕೃತಿ, ಹಸ್ತಪ್ರತಿಶಾಸ್ತ್ರ ಅಧ್ಯಯನತರಗತಿ, 'ಸಿರಿಕಂಟ' ವಿದ್ಯಾರ್ಥಿಗೋಷ್ಠಿ; ಹಳಗನ್ನಡ ವಿದ್ಯಾಭ್ಯಾಸ ಶಿಬಿರ, ಹಸ್ತಪ್ರತಿ ಕಾರ್ಯಾಗಾರ, ಮನೆಮನೆ ಬಾಗಿಲಿಗೆ ಹಸ್ತಪ್ರತಿ ಪ್ರಚಾರ, ಹಸ್ತಪ್ರತಿ ಕ್ಲಿನಿಕ್ ಮುಂತಾದ ವಿಶಿಷ್ಟ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದಲ್ಲದೆ ಈಗ ಹಂಪಿ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ, ಸಂಶೋಧನ ಕೇಂದ್ರವಾಗಿ ಮಾನ್ಯತೆ ಪಡೆದು ಪಿಎಚ್.ಡಿ., ಎಂ.ಫಿಲ್ ಪದವಿಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಡಲಾಗಿದೆ. ಕಳೆದ ಸಾಲಿನಲ್ಲಿ ೧೮ ವಿದ್ಯಾರ್ಥಿಗಳು ಪಿಎಚ್.ಡಿ.ಗೆ. ಸೇರ್ಪಡೆಯಾಗಿದ್ದು ಅವರ ಫಲಿತಾಂಶ ಇಷ್ಟರಲ್ಲೆ ಹೊರಬರಬೇಕಾಗಿದೆ. ಈ ಬಾರಿ ಎಂ.ಫಿಲ್‌ಗೆ ೩೦ ವಿದ್ಯಾರ್ಥಿಗಳು ಆಯ್ಕೆ ಗೊಂಡಿದ್ದು ಅವರಿಗಾಗಿ ಶಿಕ್ಷಣ ಶಿಬಿರ ತೆರೆಯಲಾಗಿದೆ. ಈ ವರ್ಷದಿಂದ ಎಂ.ಎ., ಪಿಎಚ್.ಡಿ. ಸಂಯೋಜಕ ಪದವಿ ಕೋರ್ಸ್ ನಡೆಸಲು ಹಂಪಿ ವಿಶ್ವವಿದ್ಯಾಲಯಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ.

ಕಾರ್ಯಕ್ರಮ ನಡೆಯುವ 'ಎಂ.ವಿ.ಸೀ. ಕಲಾಭವನ'ಕ್ಕೆ ಸೌಂಡ್‌ಪ್ರೂಫ್ ತಂತ್ರಜ್ಞಾನ ಅಳವಡಿಸಿ ಆಧುನಿಕಗೊಳಿಸಲು ಮಾಜಿ ಮಂತ್ರಿ ಶ್ರೀ ರಾಮಚಂದ್ರೇಗೌಡ ಅವರು ನೀಡಿರುವ ೨ ಲಕ್ಷ ರೂಪಾಯಿ ಸಹಾಯಧನವನ್ನು ಉಪಯೋಗಿಸಿ ಕೊಳ್ಳಲಾಗುತ್ತಿದೆ. ಕೇಂದ್ರದ ಯೋಜನಾ ಮಂತ್ರಿ ಶ್ರೀ ಎಂ.ವಿ. ರಾಜಶೇಖರನ್ ಅವರು ನೀಡಿರುವ ೫ ಲಕ್ಷ ಹಣದಿಂದ ಕಲಾಭವನದ ಎರಡನೆ ಮಹಡಿಯಲ್ಲಿ ಒಂದು ಕೊಠಡಿ ನಿರ್ಮಾಣದ ಕೊನೆಯ ಹಂತದಲ್ಲಿದ್ದು ಅದನ್ನು 'ಹಸ್ತಪ್ರತಿ' ಪ್ರದರ್ಶನಾಲಯ/ಸಂರಕ್ಷಣಾಲಯವಾಗಿ ಸಜ್ಜುಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಕರ್ನಾಟಕ ಸರ್ಕಾರ ಘೋಷಿಸಿರುವ ೫ ಲಕ್ಷ ರೂಪಾಯಿ ವಾರ್ಷಿಕ ಅನುದಾನವನ್ನು ಪಡೆಯಲು ಒಂದು ಯೋಜನೆಯನ್ನು ತಯಾರಿಸಿ ಅದನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.



ಜೆ.ಡಿ.(ಎಸ್) ಮತ್ತು ಬಿ.ಜೆ.ಪಿ. ಜಂಟಿ ಸರಕಾರ ರಚಿಸಲು ವಿಫಲವಾದ ಅನಿರೀಕ್ಷಿತ ತಿರುವಿನಿಂದಾಗಿ ರಾಜ್ಯಪಾಲ ಸನ್ಮಾನ್ಯ ಶ್ರೀ ರಾಮೇಶ್ವರ ಠಾಕೂರ್ ರಾಜ್ಯಾಡಳಿತ ಸೂತ್ರ ಹಿಡಿದು ಕೆಲದಿನ ಯಶಸ್ವಿಯಾಗಿ ಕಾರ್ಯಭಾರ ನಿರ್ವಹಿಸಿ, ಜನತಂತ್ರದ ಆಶಯಕ್ಕೆ ಮನ್ನಣೆ ನೀಡಿ ಚುನಾಯಿತ ಪ್ರತಿನಿಧಿಗಳ ಸರ್ಕಾರ ರಚಿಸಲು ಮುಂದಾಗಿರುವುದು ಸ್ತುತ್ಯಾರ್ಹ. ಆದರೆ ಹೊಸ ಸರ್ಕಾರ ರಚಿಸಿದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪ ಅವರನ್ನು ಅಭಿನಂದಿಸುವ ಹೊತ್ತಿಗೆ ಹೊಸ ಸರ್ಕಾರವೂ ಪತನಗೊಂಡಿದೆ. ಮತ್ತೆ ರಾಜ್ಯಪಾಲರ ಆಡಳಿತಕ್ಕೆ ಎದುರುನೋಡುತ್ತಿದೆ. ಪ್ರತಿಷ್ಠಾನ ಕಾರ್ಯವ್ಯಾಪ್ತಿ ದಿನೇದಿನೇ ವೃದ್ಧಿಸುತ್ತಿರುವುದರಿಂದ ಅದಕ್ಕನು ಗುಣವಾಗಿ ಹೆಚ್ಚಿನ ವಾರ್ಷಿಕ ಅನುದಾನ ಕರುಣಿಸಬೇಕೆಂದು ಘನ ಸರ್ಕಾರಕ್ಕೆ ಕಳಕಳಿಯ ಮನವಿಯನ್ನು ಮಾಡುತ್ತಿದ್ದೇವೆ.



ಎಸ್.ವಿ. ಶ್ರೀನಿವಾಸರಾವ್

ಪ್ರತಿಷ್ಠಾನಕ್ಕೆ ದಿನಾಂಕ ೧-೭-೦೭ರಿಂದ ಬಂದ ದಾನಗಳ ವಿವರ

೧. ಶ್ರೀ ವರದರಾಜು	ಪ್ರತಿಷ್ಠಾನಕ್ಕೆ ದಾನ	೧,೦[illegible]-೦೦
೨. ಪ್ರೊ. ಅ.ರಾ. ಮಿತ್ರ	"	೧೫೦-೦
೩. ಡಾ. ಕೆ.ಆರ್. ಗಣೇಶ್	"	೫೦೦-೦೦
೪. ಡಾ. ಕೆ.ಪಿ. ಭಟ್	"	೧೫೦-೦೦
೫. ಹಳಗನ್ನಡ ವಿದ್ಯಾರ್ಥಿಗಳಿಂದ	"	೨೪೦-೦೦

ಎಂ.ವಿ.ಸೀ. ಶತಮಾನೋತ್ಸವ ಕಾರ್ಯಕ್ರಮಕ್ಕೆ ಶ್ರೀ ಎಸ್.ಆರ್.ಆರ್.ಕೆ. ಶರ್ಮ ಅವರು ೨ ಸಾವಿರ ರೂಪಾಯಿಗಳನ್ನು ದಾನವಾಗಿ ನೀಡಿದ್ದಾರೆ.

ಪುಸ್ತಕಗಳ ದಾನ

೧. ಗ್ರಂಥದಾನ ಎಸ್.ವಿ. ಶ್ರೀನಿವಾಸರಾವ್, ಬೆಂಗಳೂರು	೧೮೦ ಪುಸ್ತಕಗಳು
೨. ಶ್ರೀ ಕೈವಾರ ಗೋಪಿನಾಥ, ಬೆಂಗಳೂರು	೨೧ ಪುಸ್ತಕಗಳು
೩. ಶ್ರೀ ಗೋವರ್ಧನ, ಸು.ಹ., ಬೆಂಗಳೂರು	೪೪ ಪುಸ್ತಕಗಳು
೪. ಪ್ರೊ॥ ಎಲ್.ಎಸ್. ಶೇಷಗಿರಿರಾವ್, ಬೆಂಗಳೂರು	೬೫ ಪುಸ್ತಕಗಳು
೫. ಶ್ರೀಮತಿ ಎಸ್.ಕೆ. ರಮಾದೇವಮ್ಮ, ಬೆಂಗಳೂರು	೩೨ ಪುಸ್ತಕಗಳು
೬. ಶ್ರೀ ಎನ್. ಕೃಷ್ಣಸ್ವಾಮಿ, ಮೈಸೂರು	೭ ಪುಸ್ತಕಗಳು
೭. ಡಾ॥ ಜಿ.ಎಸ್. ಶಿವರುದ್ರಪ್ಪ, ಬೆಂಗಳೂರು	೮೧೯ ಪುಸ್ತಕಗಳು
೮. ಡಾ॥ ಕೆ.ಆರ್. ಗಣೇಶ್, ಬೆಂಗಳೂರು	೨೧೮ ಪುಸ್ತಕಗಳು
೯. ಕೆ. ಚಿಂತಾಮಣಿ ಮತ್ತು ಜಮುನಾ ದಂಪತಿಗಳು, ಬೆಂಗಳೂರು	೧೬೩ ಪುಸ್ತಕಗಳು
೧೦. ಅಶ್ವತ್ಥನಾರಾಯಣ	೪ ಪುಸ್ತಕಗಳು
೧೧. ಡಾ॥ ವಿಜಯಾ ಸುಬ್ಬರಾಜ್	೭ ಪುಸ್ತಕಗಳು

ಹಸ್ತಪ್ರತಿಗಳ ದಾನ

೧. ಪ್ರೊ॥ ತೀ.ಶ್ರೀ. ನಾಗಭೂಷಣ ಅವರಿಂದ	೨ ಕಾಗದದ ಹಸ್ತಪ್ರತಿಗಳು

ಉಪಕರಣಗಳ ದಾನ

೧. ಧನಂಜಯ ಅವರು ಒಂದು ಮರದ ಟೇಬಲ್ ಮತ್ತು ೨ ಮರದ ಕುರ್ಚಿಗಳನ್ನು ದಾನವಾಗಿ ನೀಡಿದ್ದಾರೆ.

ಅಲೆಮಾರಿ ಲೇಖಕಿ


ಬಂಗ್ಲಾ ಲೇಖಕಿ ತಸ್ಲೀಮಾ ನಸ್ರೀನ್ ಇದುವರೆಗೆ ಕೊಲ್ಕತ್ತದಲ್ಲಿ ನೆಲೆಸಿದ್ದರು. ಆದರೆ ಮೂಲಭೂತವಾದಿಗಳ ಉಪಟಳದಿಂದ, ಆಕ್ರೋಶದಿಂದ, ಕೊಲ್ಕತ್ತವನ್ನು ಬಿಡಬೇಕಾಯಿತು. ಇತ್ತೀಚೆಗೆ ಹೈದರಾಬಾದಿನಲ್ಲಿ ಹಲ್ಲೆಗೆ ಒಳಗಾಗಿದ್ದರು. ಜೈಪುರದಲ್ಲಿ ನೆಲೆಸಲು ಅವಕಾಶವನ್ನು ನಿರಾಕರಿಸಿದ್ದಾರೆ. ಈಗ ಮತ್ತೆ ದೆಹಲಿಗೆ ಬಿಗಿ ಭದ್ರತೆಯ ಕಾವಲಿನಲ್ಲಿ ಬಂದಿದ್ದಾರೆ. ಕೊಲ್ಕತ್ತಾಗೆ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಅವರು ಪ್ರಕಟಿಸಿದ 'ಲಜ್ಜಾ' ಕಾದಂಬರಿ ಮೂಲಭೂತವಾದಿಗಳ ಅಸ್ತ್ರವಾಯಿತು. ನಿರಾಶ್ರಿತಳಾಗಿ ಬಂದಿರುವ ಲೇಖಕಿಯನ್ನು ಕಾಪಾಡಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ಆಕೆಯ ಕೃತಿಗಳ ಗುಣಮಟ್ಟವನ್ನು ವಿಮರ್ಶೆಮಾಡೋಣ. ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗಿದಾಗ ನಾವೆಲ್ಲರೂ ಆಕೆಗೆ ಬೆಂಬಲ ವ್ಯಕ್ತಪಡಿಸಬೇಕು.

ಖ್ಯಾತ ಸಾಹಿತಿ, ವಿಮರ್ಶಕ ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರೊಡನೆ ಸಂದರ್ಶನ

ಸಂದರ್ಶಕರು : ಎಸ್.ವಿ. ಶ್ರೀನಿವಾಸರಾವ್

ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರು ೭೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ನಿಯೋಜಿತರಾಗಿದ್ದಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ಘೋಷಿಸಿದಾಗ, ನನಗಾದ ಆನಂದ ಅಷ್ಟಿಷ್ಟಲ್ಲ. ನನಗೊಬ್ಬನಿಗೇ ಅಲ್ಲ, ಅವರ ಅಸಂಖ್ಯ ಅಭಿಮಾನಿಗಳಿಗೆ ಅಷ್ಟೇ ಸಂತೊಷ ವಾಗಿದೆ. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಪದಾಧಿಕಾರಿಗಳಿಗೆ ಹಾಗೂ ಎಲ್ಲಾ ಸದಸ್ಯರಿಗೂ ಇನ್ನೂ ಹೆಚ್ಚಿನ ಆನಂದ ತರುವ ವಿಷಯ ಇದಾಗಿತ್ತು. ಏತಕ್ಕೆಂದರೆ ಅವರು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸ್ಥಾಪನೆಗೆ ಎಂ.ವಿ.ಸೀ. ಅವರೊಡನೆ ಶ್ರಮಿಸಿದವರಲ್ಲಿ ಪ್ರಮುಖರಾಗಿದ್ದರು. ಅಷ್ಟೇ ಅಲ್ಲದೆ ಇವರು ಕೆಲಕಾಲ ಪ್ರತಿಷ್ಠಾನದ ಅಧ್ಯಕ್ಷರಾಗಿ ಇದರ ಪುರೋಭಿವೃದ್ಧಿಗಾಗಿ ಅಹರ್ನಿಶಿ ದುಡಿದವರಾಗಿದ್ದಾರೆ. ಆದ್ದರಿಂದ ನಮಗೆ ಅವರ ಬಗ್ಗೆ ಹೆಚ್ಚಿನ ಗೌರವ, ಅಭಿಜಾತ ಪ್ರೀತಿ, ಅಭಿಮಾನ ಹಾಗೂ ಪೂಜ್ಯ ಭಾವನೆ ತುಂಬಿ ಬಂದಿದೆ. ಅವರ ಅಪೂರ್ವ ಸಾಹಿತ್ಯ ಕೊಡುಗೆ ಬಗ್ಗೆ ಅಪಾರ ಮೆಚ್ಚುಗೆ ಇದೆ.

ಅವರದು ಬಹುಮುಖ ಪ್ರತಿಭೆ, ಸೃಜನಶೀಲ, ಸಾಹಿತಿಯಾಗಿ ಕನ್ನಡ ಹಾಗೂ ಇಂಗ್ಲಿಷಿನ ಪಂಡಿತರಾಗಿ, ಜನಪ್ರಿಯ ವಾಗ್ಮಿಯಾಗಿ, ವಿದ್ಯಾರ್ಥಿಪ್ರಿಯ ಉಪನ್ಯಾಸಕರಾಗಿ, ಖ್ಯಾತ ವಿಮರ್ಶಕರಾಗಿ, ಕನ್ನಡ ಪರ ಹೋರಾಟಗಾರರಾಗಿ, ಇವರು, ಕನ್ನಡ ಜನಮನದಲ್ಲಿ ಶಾಶ್ವತವಾದ ಗೌರವಾನ್ವಿತ ಸ್ಥಾನ ಗಳಿಸಿಕೊಂಡಿದ್ದಾರೆ. ಲಕ್ಷಾಂತರ ವಿದ್ಯಾರ್ಥಿಗಳಿಗೆ ಗುರುವಾಗಿದ್ದಾರೆ. ಕನ್ನಡಪರ ಸಂಘಸಂಸ್ಥೆಗಳಿಗೆ ಮಾರ್ಗದರ್ಶಕರಾಗಿದ್ದಾರೆ. ಆದರದ ಚಿಂತಕರಾಗಿದ್ದಾರೆ. ಸರ್ವರ ಅಭಿಮಾನಕ್ಕೆ ಪಾತ್ರರಾದ ಅನುಕರಣೀಯ ಹಾಗೂ ಪೂಜನೀಯ ವ್ಯಕ್ತಿಯಾಗಿದ್ದಾರೆ.



೧೨-೮-೦೭ ರಂದು ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಚಿ. ಶ್ರೀನಿವಾಸರಾಜು, ಗೌ. ಕಾರ್ಯದರ್ಶಿ ಪ್ರೊ. ನಾ. ಗೀತಾಚಾರ್ಯ ಮತ್ತು ವ್ಯವಸ್ಥಾಪಕ ಕಾರ್ಯದರ್ಶಿಯಾದ ನಾನು ಬಹಳ ಸಂಭ್ರಮದಿಂದ ಅವರನ್ನು ಅವರ ಸ್ವಗೃಹದಲ್ಲಿ ಸನ್ಮಾನಿಸಲು ಹೋದೆವು.

ಗಂಡ ಹೆಂಡತಿ ಬಹಳ ಆದರದಿಂದ ನಮ್ಮನ್ನು ಸ್ವಾಗತಿಸಿದರು. ಶ್ರೀ ಮುದ್ದುಕೃಷ್ಣ ಅವರ ನೇತೃತ್ವದಲ್ಲಿ ಸುಗಮ ಸಂಗೀತದ ಹಲವು ಕಲಾವಿದರು ಶ್ರೀ ಎಲ್.ಎಸ್.ಎಸ್. ಅವರನ್ನು ಸನ್ಮಾನಿಸಿ ಅದೇ ತಾನೆ ಹೊರ ಹೊರಟಿದ್ದರು.

ಆತಿಥ್ಯಕ್ಕೆ ಹೆಸರಾದ ಶ್ರೀಮತಿ ಭಾರತಿ ಶೇಷಗಿರಿರಾವ್ ಅವರು ನಮಗೆಲ್ಲಾ ಸಿಹಿ ನೀಡಿ ಸತ್ಕರಿಸಿದರು. ನಾವುಗಳೆಲ್ಲಾ ಪ್ರತಿಷ್ಠಾನದ ವತಿಯಿಂದ ಶ್ರೀ ಶೇಷಗಿರಿರಾಯರಿಗೆ ಶಾಲು ಹೊದಿಸಿ, ಫಲ ತಾಂಬೂಲ ನೀಡಿ ಹಾರ್ದಿಕ ವಾಗಿ ಸನ್ಮಾನಿಸಿ ಶುಭ ಕೋರಿದೆವು. ಅನಂತರ ನಾನು ಪ್ರತಿಷ್ಠಾನದ ವಾರ್ತಾಪತ್ರಕ್ಕಾಗಿ ಪುಟ್ಟ ಸಂದರ್ಶನ ನಡೆಸಬೇಕೆಂದು ಕೋರಿಕೆ ಸಲ್ಲಿಸಿದಾಗ ಅವರು ಸಂತೋಷದಿಂದ ಒಪ್ಪಿಗೆ ನೀಡಿದರು.

"ಸಾರ್, ತಾವು ಖ್ಯಾತ ಸೃಜನಶೀಲ ಸಾಹಿತಿಗಳು, ನುರಿತ ಹಿರಿಯ ವಿಮರ್ಶಕರು, ಅಗಣಿತ ಶಿಷ್ಯ ಕೋಟಿಯನ್ನೇ ಹೊಂದಿದ್ದೀರಿ. ಸುಪ್ರಸಿದ್ಧ ವಾಗ್ಮಿಗಳಾಗಿರುವ ತಾವು ತಮ್ಮ ಪ್ರಬುದ್ಧ ಹಾಗೂ ವಿದ್ವತ್‌ಪೂರ್ಣ ಮಾತಿನಿಂದ ಶ್ರೋತೃಗಳನ್ನು ಸಮ್ಮೋಹನಗೊಳಿಸುವ ಶಕ್ತಿಯನ್ನು ಹೊಂದಿದ್ದೀರಿ. ತಮ್ಮ ಮೌಲಿಕ ವ್ಯಕ್ತಿತ್ವದಿಂದ ದೇಶಾದ್ಯಂತಾ ಚಿರಪರಿಚಿತರಾಗಿದ್ದೀರಿ. ಆದ್ದರಿಂದ ತಮ್ಮ ವೈಯಕ್ತಿಕ ಜೀವನ ಹಾಗೂ ಸಾಹಿತ್ಯಿಕ ವೈಶಿಷ್ಟ್ಯವನ್ನು ಪ್ರತಿಮಿಸುವ ಪ್ರಶ್ನೆಗಳನ್ನು ಕೇಳುವ ಬದಲು ತಮಗೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಕ್ಕೆ ಸಂಬಂಧಿಸಿದಂತೆ ಎರಡು ಪ್ರಶ್ನೆಗಳನ್ನು ಮಾತ್ರ ಕೇಳಬೇಕೆಂದಿದ್ದೇನೆ.

"ಸರಿ, ಪ್ರಶ್ನೆಗಳನ್ನು ಕೇಳಿ. ನನಗೆ ತಿಳಿದಿರುವುದನ್ನು ಹೇಳುತ್ತೇನೆ. ನನ್ನ ಸಂದರ್ಶನವನ್ನು ನೀವೇ ಇತ್ತೀಚೆಗೆ 'ಕರ್ಮವೀರ'ದಲ್ಲಿ ಪ್ರಕಟಿಸಿದ್ದೀರಲ್ಲಾ."

ಮೊದಲ ಪ್ರಶ್ನೆ : ತಾವು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕೆಲಕಾಲ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದೀರಿ. ಆಗ ತಾವು ಕಂಡ ಕ.ಸಾ. ಪರಿಷತ್ತಿಗೂ ಈಗ ತಾವು ಕಾಣುತ್ತಿರುವ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳಲ್ಲಿ, ಧ್ಯೇಯ ಧೋರಣೆಗಳಲ್ಲಿ, ಆಡಳಿತ ವ್ಯವಸ್ಥೆಯಲ್ಲಿ ಆಗಿರುವ ಬದಲಾವಣೆಗಳ ಬಗ್ಗೆ ತಮ್ಮ ಅನಿಸಿಕೆಗಳೇನು?

ಉತ್ತರ : ೧೯೪೭ರ ಜನವರಿಯಲ್ಲಿ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ನಾನು ಕಾರ್ಯದರ್ಶಿಯಾಗಿ, ಶ್ರೀ ಎಂ. ವಾಸುದೇವಮೂರ್ತಿ ಕೋಶಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡಾಗ ಪರಿಷತ್ತಿನ ಹಣಕಾಸಿನ ಸ್ಥಿತಿ ತೀರ ಯೋಚನೆಗೀಡು ಮಾಡುವಂತಿತ್ತು. ಹೊಸ ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆಯಲು ಹಣವಿಲ್ಲದ ಪರಿಸ್ಥಿತಿ. ಫೆಬ್ರವರಿ ೧ ರಂದು ಸಿಬ್ಬಂದಿಗೆ ಸಂಬಳ ಕೊಡಲು ಸಾಕಷ್ಟು ಹಣ ಇರಲಿಲ್ಲ. ಪ್ರೊ. ತೀ.ನಂ.ಶ್ರೀ. ಅವರು ಕನ್ನಡ-ಕನ್ನಡ ನಿಘಂಟಿನ ಸಂಪಾದಕ ಸಮಿತಿಯ ಸಭೆಯನ್ನು ಕರೆಯಬೇಕೆಂದು ಸೂಚಿಸಿ ಒಂದು ತಿಂಗಳಾದರೂ ಸಭೆ ಕರೆಯಲಿಲ್ಲವೆಂದು ಅವರು ಅಸಮಾಧಾನಪಟ್ಟಿದ್ದುಂಟು. ಅಧ್ಯಕ್ಷರು ಜಟಕಾದಲ್ಲಿ ಪರಿಷತ್ತಿಗೆ ಬರುತ್ತಿದ್ದರು. ಅದರ ಬಾಡಿಗೆಯನ್ನು ಅವರೇ ಭರಿಸುತ್ತಿದ್ದರು. ಬಿ.ಎಂ.ಶ್ರೀ. ಅಚ್ಚುಕೂಟ ದತ್ತ ಗಮನ ಹರಿಸಿ, ಆಗ ಸರ್ಕಾರಿ ಮುದ್ರಣಾಲಯದ ಸಹಾಯಕ ನಿರ್ದೇಶಕರಾಗಿದ್ದ ಶ್ರೀ ಶ್ರೀರಾಮ್ ಅವರನ್ನು ತಾಂತ್ರಿಕ ಸಲಹೆಗಾರರಾಗಿರಲು ಒಪ್ಪಿಸಿ, ವರಮಾನವನ್ನು ಹೆಚ್ಚಿಸಲು ಪ್ರಯತ್ನ ಪಟ್ಟೆವು. ಬಾಕಿ ಇದ್ದ ಬಿಲ್‌ಗಳ ವಸೂಲಿಗೆ ಪ್ರಯತ್ನ ಮಾಡಿದೆವು. 'ಕನ್ನಡ ಬಾವುಟ'ದ ಇನ್ನೊಂದು ಆವೃತ್ತಿಯನ್ನು ಹೊರತಂದೆವು. ಹೊಸ ಸದಸ್ಯರನ್ನು ಪಡೆಯಲು ಶ್ರಮಿಸಿದೆವು. ಹೀಗೆ ಹಲವುರೀತಿಗಳಲ್ಲಿ ವರಮಾನವನ್ನು ಹೆಚ್ಚಿಸಿದೆವು. ಗಮಕ ವಿದ್ಯಾರ್ಥಿಗಳ ತರಗತಿ ನಡೆಯುತ್ತಿತ್ತು. ಗಮಕ ಅಧ್ಯಾಪಕರ ಶಿಕ್ಷಣ ತರಗತಿಯನ್ನು ಪ್ರಾರಂಭಿಸಿದೆವು. ಆವತ್ತಿನ ಸಿಬ್ಬಂದಿಗೆ ತಿಂಗಳಿಗೆ ಸ್ಥಿರ ವೇತನವಷ್ಟೇ. ವೇತನ ಶ್ರೇಣಿ ಇರಲಿಲ್ಲ. ಮೊದಲನೇ ಕಾರ್ಯಸಮಿತಿ ಸಭೆಯಲ್ಲಿಯೆ ವೇತನಶ್ರೇಣಿಗಳಿಗೆ ಒಪ್ಪಿಗೆ ಪಡೆದೆವು. ಆಗ ತಾನೆ ದೇಶಕ್ಕೆ ಸ್ವಾತಂತ್ರ್ಯ ಬಂದಿತ್ತು. ೧೯೪೭ರ ಆಗಸ್ಟ್‌ನಲ್ಲಿ ಪ್ರಥಮ ಭಾರತೀಯ ಗವರ್ನರ್ ಜನರಲ್ ರಾಜಗೋಪಾಲಚಾರಿಯವರು ಬೆಂಗಳೂರಿಗೆ ಬಂದಾಗ ಸಾಹಿತ್ಯ ಪರಿಷತ್ತಿಗೆ ಬರಲು ಒಪ್ಪಿದರು. ಕಟ್ಟಡದ ಗೋಡೆಗಳೆಲ್ಲ ಕೊಳಕಾಗಿದ್ದವು. ಸುಣ್ಣ-ಬಣ್ಣಕ್ಕೆ ಹಣವಿರಲಿಲ್ಲ. ಚಾಮರಾಜಪೇಟೆಯ ಕನ್ನಡ ಸಂಘದ ತರುಣರು ನನ್ನ ನೆರವಿಗೆ ಬಂದರು. ಬೇಕಾದಷ್ಟು ಬಣ್ಣಬಣ್ಣದ ಎಲೆಗಳನ್ನು ತಂದು ಅವನ್ನೆಲ್ಲ ಗೋಡೆಗಳಿಗೆ ಹಚ್ಚಿ ಗೋಡೆಗಳು ಅಂದವಾಗಿ ಕಾಣುವಂತೆ ಮಾಡಿದರು.

ಈಗಿನ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಿತಿಯೇ ಬೇರೆ. ಆಗ ಪರಿಷತ್ತಿಗೆ

ಇದ್ದದ್ದು ಒಂದೇ ಕಟ್ಟಡ-ಒಂದು ಅಂತಸ್ತಿನದು. ಈಗ ಪರಿಷತ್ತಿಗೆ ಸ್ವಂತ ಕಾರ್ ಇದೆ. ಸರ್ಕಾರದ ಅನುದಾನ (ಆಗ ವರ್ಷಕ್ಕೆ ೩೦೦೦ ರೂ.ಗಳು) ಹೆಚ್ಚಿದೆ. ಸಿಬ್ಬಂದಿಯ ಸಂಬಳವನ್ನು ಸರ್ಕಾರ ವಹಿಸಿಕೊಂಡಿದೆ. ಆಗ ಒಂದು ಸಾವಿರ ಸದಸ್ಯರಿದ್ದರೋ ಇಲ್ಲವೋ ಈಗ ಐವತ್ತು ಸಾವಿರ ಮೀರಿದೆ. ಪರಿಷತ್ತಿನ ಪ್ರಕಟಣೆಗಳ ಮಾರಾಟದಿಂದ ತಕ್ಕಷ್ಟು ಆದಾಯವಿದೆ. ಆಗ ಇದ್ದ ಕಚೇರಿ ಸಿಬ್ಬಂದಿ-ಸಹಾಯಕ ಕಾರ್ಯದರ್ಶಿ, ಒಬ್ಬ ಲೆಕ್ಕದ ಗುಮಾಸ್ತರು, ಗ್ರಂಥಾಲಯಕ್ಕೆ ಗುಮಾಸ್ತರು, ಮೂವರು ಜವಾನರು. ಈಗ ಪರಿಷತ್ತಿನ ಕಾರ್ಯವ್ಯಾಪ್ತಿ ಹೆಚ್ಚಿದೆ. ಸಿಬ್ಬಂದಿಯೂ ಹೆಚ್ಚಿವೆ.

ನನಗೆ ಅಸಾಧಾರಣ ಸಹಕಾರ ನೀಡಿದ ಅಂದಿನ ಸಿಬ್ಬಂದಿ ವರ್ಗವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಎರಡನೆ ಪ್ರಶ್ನೆ : ಬಿ.ಎಂ.ಶ್ರೀ. ಪ್ರತಿಷ್ಠಾನದ ಉಗಮ ಮತ್ತು ಬೆಳವಣಿಗೆಯಲ್ಲಿ ತಮ್ಮ ಪಾತ್ರ ಹಿರಿದು. ಪ್ರಾರಂಭದಿಂದಲೂ ಇದರ ಸಮಗ್ರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವಿರಿ; ಪ್ರತಿಷ್ಠಾನ ೨೦೦೪ರಲ್ಲಿ ರಜತೋತ್ಸವ ಸಹ ಆಚರಿಸಿದೆ. ಇದರ ಬೆಳವಣಿಗೆ, ಪ್ರಗತಿ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ದಯವಿಟ್ಟು ತಿಳಿಸುವಿರಾ!

ಉತ್ತರ : ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸ್ಥಾಪಕರಾದ ಪ್ರೊ. ಎಂ.ವಿ. ಸೀತಾರಾಮಯ್ಯನವರು ಇದ್ದಕ್ಕಿದ್ದಂತೆ ನಿಧನರಾದಾಗ ನಾನು ಅಧ್ಯಕ್ಷನಾಗಿ ಹೊಣೆ ಸ್ವೀಕರಿಸಬೇಕಾಯಿತು. ಕಚೇರಿ ಅವರ ಮನೆಯ ಆವರಣದಲ್ಲಿಯೇ ಅವರು ಕಟ್ಟಿಸಿದ್ದ ಎರಡು ಕೊಠಡಿಗಳಲ್ಲಿತ್ತು. ಪ್ರತಿಷ್ಠಾನದ ಸಂಪನ್ಮೂಲಗಳು ಬಹಳ ಮಿತವಾಗಿದ್ದವು. ಎಂ.ವಿ.ಸೀ. ಅವರು ಸಮರ್ಪಣ ಭಾವದಿಂದ, ದಕ್ಷತೆಯಿಂದ ಸಂಸ್ಥೆಯನ್ನು ಬೆಳೆಸಿದ್ದರು. 'ಶ್ರೀ' ಅವರ ಶತಮಾನೋತ್ಸವವನ್ನು ನಿರ್ವಹಿಸಿದ್ದರು, ಸಂಸ್ಥೆಯ ದಶಮಾನೋತ್ಸವವನ್ನು ನಿರ್ವಹಿಸಿದ್ದರು. ಅವರ ಕೊಠಡಿಯಲ್ಲಿ ಕುಳಿತೇ ಅವರು ಎಷ್ಟು ಕೆಲಸಗಳನ್ನು ನಿರ್ವಹಿಸುತ್ತಿದ್ದರು ಎನ್ನುವುದು ಅಚ್ಚರಿಯನ್ನುಂಟು ಮಾಡುತ್ತದೆ. ನನಗೆ ಅವರ ದಕ್ಷತೆಯಾಗಲಿ, ವಿದ್ವತ್ತಾಗಲಿ ಇರಲಿಲ್ಲ. ಆದರೆ ಕಾರ್ಯದರ್ಶಿ ಪ್ರೊ. ಗೀತಾಚಾರ್ಯ, ಕೋಶಾಧಿಕಾರಿ ಶ್ರೀ ರಾಮಸ್ವಾಮಿ ಅಯ್ಯರ್, ಶ್ರೀ ನಿಟ್ಟೂರು ಶ್ರೀನಿವಾಸ ರಾಯರು, ಶ್ರೀ. ಜಿ. ನಾರಾಯಣ, ಡಾ. ಚಿದಾನಂದಮೂರ್ತಿ ಮೊದಲಾದ ಹಿರಿಯರು, ಗೆಳೆಯರು ಸಹಕಾರ ನೀಡಿದರು. ಶ್ರೀ ಎಚ್.ಜಿ. ಸೋಮಶೇಖರ ರಾಯರ ನೆರವಿನಿಂದ ಕೆನರಾ ಬ್ಯಾಂಕ್ ಒಂದು ಯೋಜನೆಗೆ ಹತ್ತು ಸಾವಿರ ರೂ.ಗಳನ್ನು ನೀಡಿತು. ಮಾರ್ಚಿ ೨೬-೨೭ ಆದರೂ ವಾರ್ಷಿಕ ಅನುದಾನ ಕೈಗೆ ಬಾರದೇ ಇದ್ದಾಗ ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರ ಮತ್ತು ಕಾರ್ಯದರ್ಶಿಗಳ ಕಚೇರಿಗಳಿಗೆ ಹೋದೆ. ಇಬ್ಬರೂ ನೆರವಾದರು. ಹಣ ಕೈಗೆ ಬಂದಿತು. ಶ್ರೀ ಎಂ.ವಿ.ಸೀ. ಅವರ ಮಕ್ಕಳ ನೆರವನ್ನು ಕಾರ್ಯ ಸಮಿತಿಯ ಸದಸ್ಯರ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಬೇಕು. ನಮ್ಮ ಸಂಪನ್ಮೂಲದ ಚೌಕಟ್ಟಿನಲ್ಲಿ ಹಲವು, ಸಾರ್ಥಕ ಕಾರ್ಯಕ್ರಮಗಳನ್ನು ನಡೆಸಿದೆವು. ಪುಸ್ತಕಗಳನ್ನು ಪ್ರಕಟಿಸಿದೆವು.

ಈಗ ಪ್ರತಿಷ್ಠಾನಕ್ಕೆ ಎರಡು ಅಂತಸ್ತುಗಳ ಸ್ವಂತ ಕಟ್ಟಡವಿದೆ. ಕಟ್ಟಡ ಇನ್ನು ಊರ್ಧ್ವಮುಖವಾಗಿದೆ. ಸರ್ಕಾರದಿಂದ ಐದು ಲಕ್ಷ ರೂಪಾಯಿಗಳ ಅನುದಾನದ ನೆರವಿದೆ. ಎಂ.ವಿ.ಸೀ. ಅವರ ಆಶಯದಂತೆ ಇಲ್ಲಿ ಉನ್ನತ ಅಧ್ಯಯನ ನಡೆಯುತ್ತಿದೆ. ಹಂಪೆಯ ಕನ್ನಡ ವಿಶ್ವವಿದ್ಯಾಲಯ ಇದನ್ನು ಸಂಶೋಧನೆಯ ಕೇಂದ್ರ ಎಂದು ಪರಿಗಣಿಸಿದೆ. ಎಂ.ಫಿಲ್ ಮತ್ತು ಪಿಎಚ್.ಡಿ. ಪದವಿಗಳಿಗೆ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಒಳ್ಳೆಯ ಗ್ರಂಥ ಭಂಡಾರವಿದೆ. ಇದರ ಭವಿಷ್ಯ ಬಹಳ ಆಶಾದಾಯಕವಾಗಿದೆ.

ಕನ್ನಡ ಸಾಹಿತ್ಯಕ್ಷೇತ್ರ ಕಂಡ ಅಪರೂಪದ ಗೌರವಪೂರ್ಣ ವ್ಯಕ್ತಿತ್ವದ ಸುಸಂಸ್ಕೃತ, ಸೌಜನ್ಯಪೂರ್ಣ, ಆದರಣೀಯ ವ್ಯಕ್ತಿಯೆಂದರೆ ಪ್ರೊ. ಎಲ್.ಎಸ್.ಎಸ್. ಎಂಬುದರಲ್ಲಿ ಯಾವ ಕನ್ನಡಿಗನಿಗೂ ಸಂದೇಹ ವಿರದು, ಅತ್ಯಂತ ಮೃದು ಸ್ವಭಾವದ, ಸ್ನೇಹಪೂರ್ಣ ನಡವಳಿಕೆಯ ಇವರನ್ನು ಕಂಡೊಡನೆಯೇ ಎಲ್ಲರಿಗೂ ಪೂಜನೀಯ ಭಾವನೆ ತುಂಬಿ ಬರುತ್ತದೆ. ಅನೈಚ್ಛಿಕವಾಗಿ ತಲೆ ಗೌರವದಿಂದ ಬಾಗುತ್ತದೆ. ಸರ್ವರನ್ನು ಆಕರ್ಷಿಸುವ ಚುಂಬಕ ಶಕ್ತಿ ಅವರ ಮುಗ್ಧ ಕಣ್ಣುಗಳಲ್ಲಿವೆ. ಮೃದುಮಾತಿನ ಸೊಗಡಿಗೆ ಮಾರು ಹೋಗದವರೇ ಇಲ್ಲ. ಇಂತಹ ಉದಾತ್ತ ವ್ಯಕ್ತಿತ್ವದ, ಆದರ್ಶ, ಅನುಕರಣೀಯ ವ್ಯಕ್ತಿಗೆ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಿರಿ ಲಭಿಸುವುದು ತೀರಾ ತಡವಾಯಿತಲ್ಲ ಎಂಬ ಅತೃಪ್ತಿ ಇದ್ದರೂ ಈಗ ಲಭಿಸಿತಲ್ಲಾ ಎಂಬ ಸಂತಸ ತೃಪ್ತಿ ತಂದಿದೆ.

ಅವರಿಗೆ ಪ್ರತಿಷ್ಠಾನದ ವತಿಯಿಂದ ಹಾಗೂ ಸಮಸ್ತ ಕನ್ನಡಿಗರ ಪರವಾಗಿ ಹಾರ್ದಿಕ ಶುಭಾಶಯ ಆಶಿಸಿ ಅಭಿನಂದಿಸಿ, ನಮಿಸಿ ಹೊರಬಂದೆವು. ❑


ಕರ್ನಾಟಕ ಲೇಖಕಿಯರ ಸಮ್ಮೇಳನಾಧ್ಯಕ್ಷೆ ನೀಳಾದೇವಿ ಕರೆ

ಕರ್ನಾಟಕ ಲೇಖಕಿಯರ ಸಂಘ ತನ್ನ ೬ನೇ ಸಾಹಿತ್ಯ ಸಮ್ಮೇಳನವನ್ನು ಮಂಡ್ಯದಲ್ಲಿ ೨೪ ಮತ್ತು ೨೫ ನವೆಂಬರ್ ೨೦೦೭ ನಡೆಸಿತು. ಲೇಖಕಿ ಶ್ರೀಮತಿ ನೀಳಾದೇವಿ ಅವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಲೇಖಕಿಯರ ಸಾಹಿತ್ಯ ಕೃಷಿಯ ಬಗ್ಗೆ ಹಲವಾರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

"ಮಹಿಳೆ ಜಗತ್ತಿನ ಜ್ಞಾನದ ಕಡೆ ಮುಖ ಮಾಡಿದ್ದಾಳೆ. ಆಕೆಯ ಎಲ್ಲಾ ಬರವಣಿಗೆಗಳು ಸಾಹಿತ್ಯ ರಚನೆಯನ್ನು ಜೀವಂತ ವಾಗಿಡುವುದರ ಜತೆಗೆ ಸಮಾಜಮುಖಿಯಾಗಿಯೂ ಇರಬೇಕು. ಅಶಾಂತತೆಯ ಸಮಾಜಕ್ಕೆ ಶಾಂತಿ ಸಂದೇಶಸಾರುವ ಮನೋಧರ್ಮ ಹಾಗೂ ಮಾನವೀಯತೆಯ ಗುಣಗಳನ್ನು ಸಾರಬೇಕು."

"ಇಂದಿನ ಸಮಾಜದಲ್ಲಿ ವಾಸ್ತವತೆಗೆ ಬೆಲೆಯೇ ಇಲ್ಲ. ಕೇವಲ ಕಾಲ್ಪನಿಕವಾಗಿ ಸೃಷ್ಟಿಸುವ ಕೃತಿ ಬಹಳ ದಿನ ಬದುಕಲಾರದು. ಆದ್ದರಿಂದ ವಾಸ್ತವತೆಗೆ ಮೆರಗು ನೀಡುವ ಕಲ್ಪನೆ ಮೇಳೈಸಿದಾಗ ಮಾತ್ರ ಉತ್ತಮ ಕೃತಿ ಸೃಷ್ಟಿಯಾಗಲು ಸಾಧ್ಯ. ಇದೇ ಜಗತ್ತಿನಲ್ಲಿ ಕ್ರೌರ್ಯ, ಅಶಾಂತಿ, ಜಾತಿಮತಗಳ ಅಂಧತೆಯ ಕೇಂದ್ರ ಬಿಂದುವಾದ ಹೆಣ್ಣನ್ನು ಪ್ರತಿಬಿಂಬಿಸುತ್ತಿದ್ದಾರೆ."

"ಈ ಹಿಂದೆ ಪಟ್ಟಣದವರಂತೆ ಹಳ್ಳಿಗಾಡಿನ ಹೆಣ್ಣುಮಕ್ಕಳು ಸಾಹಿತ್ಯಾಭ್ಯಾಸ ಮಾಡುತ್ತಿದ್ದರು. ಈಗೀಗ ಮಾಧ್ಯಮಗಳ ಭರಾಟೆಯಲ್ಲಿ ಅವರು ನಗರವಾಸಿಗಳಂತೆ ಆಗಿ ಬಿಟ್ಟಿದ್ದಾರೆ. ಅವರಲ್ಲಿ ಸಾಹಿತ್ಯದ ಆರಾಧನೆ ಇಂಗಿ ಹೋಗಿದೆ. ಹಿಂದೆ ಗ್ರಾಮೀಣ ಮಹಿಳೆಯ ಕೈಯಲ್ಲಿ ಲೇಖನಿ ಇರಲಿಲ್ಲವಾದರೂ ಮೌಖಿಕವಾಗಿ ಹಾಡಿ ಸಾಹಿತ್ಯ ಹಂಚುತ್ತಿದ್ದರು. ಕುಟ್ಟುವ, ಬೀಸುವ, ಸೋಬಾನೆ, ಹಸೆಮಣೆ, ಬೀಗರ ಹಾಡುಗಳು ಅವರ ದಿನಚರಿಯಲ್ಲಿ ಬೆರೆತು ಹೋಗುತ್ತಿತ್ತು. ಅವರ ಉಸಿರೇ ಸಾಹಿತ್ಯವಾಗಿತ್ತು. ಆಧುನಿಕ ದಿನಗಳಲ್ಲಿ ಅವರ ಸಾಹಿತ್ಯದ ಸೊಲ್ಲು ಎತ್ತದೆ ಹೋಗುತ್ತಿದೆ. ನಮ್ಮ ಸಂಸ್ಕೃತಿ ಸಂಸ್ಕಾರಗಳನ್ನು ಕಡೆಗಣಿಸಿ ಎಲ್ಲರೂ ಪಾಶ್ಚಾತ್ಯರ ಅನುಕರಣೆ ಮಾಡ ಹೊರಟರೆ ನಮ್ಮ ಸಂಸ್ಕೃತಿಯ ಬೇರಿನ ಮೂಲ ಮುರುಟಿ ಹೋಗುತ್ತದೆ".



ಬಿ.ಎಂ.ಶ್ರೀ ಪ್ರತಿಷ್ಠಾನದ ನೂತನ ಅಧ್ಯಕ್ಷರಾದ

ಡಾ. ಪಿ.ವಿ.ನಾರಾಯಣ್ *ಅವರಿಗೆ ಹಾರ್ದಿಕ ಅಭಿನಂದನೆಗಳು*

(ಜನನ : 19/12/1942, ತುಮಕೂರು ಜಿಲ್ಲೆ ಅಕ್ಕಿರಾಂಪುರದಲ್ಲಿ)

ಬಹುಮುಖ ಪ್ರತಿಭೆಯ ಕನ್ನಡ ಸಾಹಿತಿ, ವಿಮರ್ಶಕ, ವಿದ್ಯಾರ್ಥಿಪ್ರಿಯ ಕನ್ನಡ ಪ್ರಾಧ್ಯಾಪಕ, ಕೆಚ್ಚು ಹುಮ್ಮಸ್ಸಿನ ಚಳುಚಳಿಗಾರ, ಡಾ. ಪಿ.ವಿ. ನಾರಾಯಣರು ಕಾರ್ಯಕಾರಿ ಸಮಿತಿಯ ಕೋರಿಕೆಯನ್ನು ಮನ್ನಿಸಿ, ಪ್ರೊ. ಚಿ.ಶ್ರೀನಿವಾಸರಾಜು ಅವರ ಅಕಾಲಿಕ ಮರಣದಿಂದ ತೆರವಾದ ಬಿ.ಎಂ.ಶ್ರೀಸ್ಮಾರಕ ಪ್ರತಿಷ್ಠಾನದ ನೂತನ ಅಧ್ಯಕ್ಷರಾಗಿ ದಿನಾಂಕ 3/1/08 ರಂದು ಅಧಿಕಾರ ಸ್ವೀಕರಿಸಿದರು. ಪ್ರತಿಷ್ಠಾನವು ಅವರನ್ನು ಗೌರವದಿಂದ ಸ್ವಾಗತಿಸುತ್ತದೆ, ಅಭಿನಂದಿಸುತ್ತದೆ ಹಾಗೂ ಹಾರ್ದಿಕವಾಗಿ ಶುಭ ಕೋರುತ್ತದೆ.



ಮೆರೆದು ಜನಮನದಲ್ಲಿ ಶಾಶ್ವತ ನೆಲೆಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯದರ್ಶಿಯಾಗಿ, ಕ್ರೈಸ್ಟ್‌ಕಾಲೇಜಿನಲ್ಲಿ ಕನ್ನಡ ಪುಸ್ತಕ ಸಂಸ್ಕೃತಿಯನ್ನು ಹುಟ್ಟುಹಾಕಿ, ಬೆಳೆಸಿದ ಮೊದಲಿಗರಾಗಿದ್ದುದಲ್ಲದೆ. ಸಾಹಿತ್ಯ ಕ್ಷೇತ್ರಕ್ಕೂ ವೈವಿಧ್ಯ ಪೂರ್ಣ ಸಾಹಿತ್ಯ ಕೃತಿಗಳನ್ನು ನೀಡಿ ಸಂಪನ್ನಗೊಳಿಸಿದ್ದು, ಸೃಜನಶೀಲ ಸಾಹಿತಿಯಾಗಿಯೂ ಮೆರೆದಿದ್ದಾರೆ.

ಅವರದು ವಿಶಿಷ್ಟವಾದ ಸ್ವಂತಿಕೆ. ಪ್ರಶ್ನಾತೀತ ನಿಷ್ಠುರ ಕನ್ನಡಪರ ನಿಷ್ಠೆ. ಮಾತು ಸ್ವಲ್ಪ ಕಡಿಮೆ. ಆದರೆ ಅವರದು ನಿಸ್ವಾರ್ಥ, ನಿಷ್ಕಲ್ಮಷ ಚಟುವಟಿಕೆ. ಅವರು ಅಧ್ಯಕ್ಷರಾಗಿದ್ದ 13ತಿಂಗಳಲ್ಲಿ ಪ್ರತಿಷ್ಠಾನಕ್ಕೆ ದಿಟ್ಟ ಹೊಸ ಕಾರ್ಯ ಸೂಚಿರೂಪಿಸಿದ್ದರು. ಹೊಸರೂಪಕೊಡಲು ಅಹರ್ನಿಶಿ ಶ್ರಮಿಸಿದ್ದರು. ಬಹುಹಿಂದಿನಿಂದ ಬರುತ್ತಿದ್ದ 'ಕರ್ನಾಟಕ ಲೋಚನ'ವನ್ನು ವಿದ್ವತ್ ಲೇಖನಗಳಿಗೆ ಮಾತ್ರ ಮೀಸಲಿರಿಸಿ ಅದರಲ್ಲಿ ಬರುತ್ತಿದ್ದ ಪ್ರತಿಷ್ಠಾನವಾರ್ತೆ; ಸಾಹಿತ್ಯವಾರ್ತೆ; ಪುಸ್ತಕ ಪರಿಚಯ ವಿಭಾಗಗಳನ್ನು ಹೊಸದಾಗಿ ಪ್ರಾರಂಬಿಸಿದ 'ವಾರ್ತಾಪತ್ರ'ಕ್ಕೆ ವರ್ಗಾಯಿಸಿ ಹೊಸ ಚಿಂತನೆಯನ್ನು ಮೆರೆದಿದ್ದಾರೆ.

'ರಾಜು ಮೇಷ್ಟ್ರು', 'ಕನ್ನಡದ ಪರಿಚಾರಕ'ರೆಂದೇ ಕರೆಸಿಕೊಳ್ಳಲು ಇಷ್ಟಪಡುತ್ತಿದ್ದ, ನಮ್ಮ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಶ್ರೀ ಚಿ. ಶ್ರೀನಿವಾಸರಾಜು ಅವರು ನೀಡಿದ ಅಪಾರ ಕೊಡುಗೆಗಳನ್ನು ಅಭಿಮಾನ ಪೂರ್ವಕವಾಗಿ ಸ್ಮರಿಸುತ್ತಾ, ಅವರ ಮರಣಕ್ಕಾಗಿ ದುಃಖಿಸುತ್ತಾ ಅವರಿಗೆ ಗೌರವಪೂರ್ವಕವಾಗಿ ಶ್ರದ್ಧಾಂಜಲಿಯನ್ನು ಈ ಕಾರ್ಯಕಾರಿ ಸಮಿತಿಯು ಅರ್ಪಿಸುತ್ತಿದೆ. ಅವರ ಹೆಸರು ಶಾಶ್ವತವಾಗಿ ಉಳಿಯುವಂತಹ ಒಂದು ಸಾಹಿತ್ಯಿಕ ಕಾರ್ಯಚಟುವಟಿಕೆಯನ್ನು ಅವರ ಜನ್ಮದಿನದಂದು, (ನವಂಬರ್28)ಪ್ರತಿ ವರ್ಷವೂ ನಡೆಸಿಕೊಂಡುಬರಲು ಕಾರ್ಯಕಾರಿ ಸಮಿತಿಯು ಇಚ್ಛಿಸುತ್ತದೆ.

ಶ್ರೀ ರಾಜು ಅವರ ದಿವ್ಯ ಆತ್ಮಕ್ಕೆ ಚಿರಶಾಂತಿ ದೊರೆಯಲಿ. ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಸಹಿಸುವ ಶಕ್ತಿಯನ್ನು ಪರಮಾತ್ಮನು ಕರುಣಿಸಲಿ ಎಂದು ಸಮಿತಿ ಆಶಿಸುತ್ತದೆ.

ಅಧ್ಯಕ್ಷತೆಯನ್ನು ಪ್ರೊ. ಚಿ. ಶ್ರೀನಿವಾಸರಾಜು ಅವರು ಅನಿವಾರ್ಯ ಕಾರ್ಯನಿಮಿತ್ತ ಬರಲಾಗದ್ದರಿಂದ ಗೌರವಾಧ್ಯಕ್ಷ ಶ್ರೀ ಜಿ. ನಾರಾಯಣ ವಹಿಸಿದ್ದರು. ಸಭೆಯಲ್ಲಿ ೪೩ ಜನ ಸದಸ್ಯರು ಭಾಗವಹಿಸಿದ್ದರು. ವಿಷಯಸೂಚಿಯಲ್ಲಿರುವಂತೆ ಎಲ್ಲಾ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಿದವು. ೨೦೦೬-೦೭ರ ಆಡಳಿತ ವರದಿಯನ್ನು ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ಎಸ್.ವಿ. ಶ್ರೀನಿವಾಸರಾವ್ ಓದಿದರು. ೨೦೦೬-೦೭ನೇ ಸಾಲಿನ ಲೆಕ್ಕಪತ್ರಗಳನ್ನು ಹಾಗೂ ೨೦೦೭-೦೮ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಕೋಶಾಧಿಕಾರಿಗಳಾದ ಶ್ರೀ ಎಸ್.ಬಿ. ರಾಧಾಕೃಷ್ಣ ಮಂಡಿಸಿದರು. ನಿಯಮಾನುಸಾರ ಕಾರ್ಯ ಸಮಿತಿಯಿಂದ ಸದಸ್ಯರ ಚುನಾವಣೆ ನಡೆದು ಐದು ವರ್ಷಗಳ ಹಿಂದೆ ಆಯ್ಕೆಯಾಗಿದ್ದ ಈ ಕೆಳಕಂಡ ಸದಸ್ಯರು ನಿವೃತ್ತರಾಗಬೇಕಾಗಿದೆಯೆಂದು ಕಾರ್ಯದರ್ಶಿಗಳು ಸಭೆಗೆ ತಿಳಿಸಿ

ಉದ್ಘಾಟನೆ ಕಾರ್ಯಕ್ರಮ ಪ್ರೊ. ಚಿ. ಶ್ರೀನಿವಾಸರಾಜು ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಡಾ. ಎಚ್.ಎಸ್. ರಾಘವೇಂದ್ರರಾವ್, ಡಾ. ಕೆ.ಪಿ. ಭಟ್, ಡಾ. ಕೆ.ಆರ್. ಗಣೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಪ್ರೊ. ಡಿ. ಲಿಂಗಯ್ಯ, ಪ್ರೊ. ಹೆಚ್.ವಿ. ಮುರಳೀಧರ ಮತ್ತು ಡಾ. ಪಿ.ವಿ. ನಾರಾಯಣ ಆಗಮಿಸಿದ್ದರು. ಪ್ರೊ. ಗೀತಾಚಾರ್ಯ ಸ್ವಾಗತ ಹಾಗೂ ವಂದನಾರ್ಪಣೆ ಕಾರ್ಯಕ್ರಮವನ್ನು ನೆರವೇರಿಸಿದರು.

೧೪-೧೦-೦೭ ಭಾನುವಾರ : ಸಂಜೆ ೫-೩೦ ಗಂಟೆಗೆ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ವತಿಯಿಂದ ಸಹೃದಯಗೋಷ್ಠಿ ಆಯೋಜಿಸಲಾಗಿತ್ತು. ಪಿಎಚ್.ಡಿ. ವಿದ್ಯಾರ್ಥಿಗಳಾದ ಶ್ರೀ ಹಾಲಪ್ಪ ಅವರ 'ಜನಪರ ವೈದ್ಯದಲ್ಲಿ ಗುರುಪರಂಪರೆ', ಕುಮಾರಿ ಹೇಮಾವತಿ ಅವರು 'ಚಂದ್ರಶೇಖರ ಕಂಬಾರರ ನಾಟಕಗಳಲ್ಲಿ ಗಂಡುಹೆಣ್ಣಿನ ಸಂಬಂಧ' ಪ್ರಬಂಧಗಳನ್ನು ಮಂಡಿಸಿದರು. ಪ್ರೊ. ಚಿ. ಶ್ರೀನಿವಾಸರಾಜು,

ಇದ್ದದ್ದು ಒಂದೇ ಕಟ್ಟಡ–ಒಂದು ಅಂತಸ್ತಿನದು. ಈಗ ಪರಿಷತ್ತಿಗೆ ಸ್ವಂತ ಕಾರ್ ಇದೆ. ಸರ್ಕಾರದ ಅನುದಾನ (ಆಗ ವರ್ಷಕ್ಕೆ ೩೦೦೦ ರೂ.ಗಳು) ಹೆಚ್ಚಿದೆ. ಸಿಬ್ಬಂದಿಯ ಸಂಬಳವನ್ನು ಸರ್ಕಾರ ವಹಿಸಿಕೊಂಡಿದೆ. ಆಗ ಒಂದು ಸಾವಿರ ಸದಸ್ಯರಿದ್ದರೋ ಇಲ್ಲವೋ ಈಗ ಐವತ್ತು ಸಾವಿರ ಮೀರಿದೆ. ಪರಿಷತ್ತಿನ ಪ್ರಕಟಣೆಗಳ ಮಾರಾಟದಿಂದ ತಕ್ಕಷ್ಟು ಆದಾಯವಿದೆ. ಆಗ ಇದ್ದ ಕಚೇರಿ ಸಿಬ್ಬಂದಿ–ಸಹಾಯಕ ಕಾರ್ಯದರ್ಶಿ, ಒಬ್ಬ ಲೆಕ್ಕದ ಗುಮಾಸ್ತರು, ಗ್ರಂಥಾಲಯಕ್ಕೆ ಗುಮಾಸ್ತರು, ಮೂವರು ಜವಾನರು. ಈಗ ಪರಿಷತ್ತಿನ ಕಾರ್ಯವ್ಯಾಪ್ತಿ ಹೆಚ್ಚಿದೆ. ಸಿಬ್ಬಂದಿಯೂ ಹೆಚ್ಚಿವೆ.

ನನಗೆ ಅಸಾಧಾರಣ ಸಹಕಾರ ನೀಡಿದ ಅಂದಿನ ಸಿಬ್ಬಂದಿ ವರ್ಗವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಎರಡನೆ ಪ್ರಶ್ನೆ : ಬಿ.ಎಂ.ಶ್ರೀ. ಪ್ರತಿಷ್ಠಾನದ ಉಗಮ ಮತ್ತು ಬೆಳವಣಿಗೆಯಲ್ಲಿ ತಮ್ಮ ಪಾತ್ರ ಹಿರಿದು. ಪ್ರಾರಂಭದಿಂದಲೂ ಇದರ ಸಮಗ್ರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವಿರಿ; ಪ್ರತಿಷ್ಠಾನ ೨೦೦೪ರಲ್ಲಿ ರಜತೋತ್ಸವ ಸಹ ಆಚರಿಸಿದೆ. ಇದರ ಬೆಳವಣಿಗೆ, ಪ್ರಗತಿ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ದಯವಿಟ್ಟು ತಿಳಿಸುವಿರಾ!

ಉತ್ತರ : ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸ್ಥಾಪಕರಾದ ಪ್ರೊ. ಎಂ.ವಿ. ಸೀತಾರಾಮಯ್ಯನವರು ಇದ್ದಕ್ಕಿದ್ದಂತೆ ನಿಧನರಾದಾಗ ನಾನು ಅಧ್ಯಕ್ಷನಾಗಿ ಹೊಣೆ ಸ್ವೀಕರಿಸಬೇಕಾಯಿತು. ಕಚೇರಿ ಅವರ ಮನೆಯ ಆವರಣದಲ್ಲಿಯೇ ಅವರು ಕಟ್ಟಿಸಿದ್ದ ಎರಡು ಕೊಠಡಿಗಳಲ್ಲಿತ್ತು. ಪ್ರತಿಷ್ಠಾನದ ಸಂಪನ್ಮೂಲಗಳು ಬಹಳ ಮಿತವಾಗಿದ್ದವು. ಎಂ.ವಿ.ಸೀ. ಅವರು ಸಮರ್ಪಣ ಭಾವದಿಂದ, ದಕ್ಷತೆಯಿಂದ ಸಂಸ್ಥೆಯನ್ನು ಬೆಳೆಸಿದ್ದರು. 'ಶ್ರೀ' ಅವರ ಶತಮಾನೋತ್ಸವವನ್ನು ನಿರ್ವಹಿಸಿದ್ದರು, ಸಂಸ್ಥೆಯ ದಶಮಾನೋತ್ಸವವನ್ನು ನಿರ್ವಹಿಸಿದ್ದರು. ಅವರ ಕೊಠಡಿಯಲ್ಲಿ ಕುಳಿತೇ ಅವರು ಎಷ್ಟು ಕೆಲಸಗಳನ್ನು ನಿರ್ವಹಿಸುತ್ತಿದ್ದರು ಎನ್ನುವುದು ಅಚ್ಚರಿಯನ್ನುಂಟು ಮಾಡುತ್ತದೆ. ನನಗೆ ಅವರ ದಕ್ಷತೆಯಾಗಲಿ, ವಿದ್ವತ್ತಾಗಲಿ ಇರಲಿಲ್ಲ. ಆದರೆ ಕಾರ್ಯದರ್ಶಿ ಪ್ರೊ. ಗೀತಾಚಾರ್ಯ, ಕೋಶಾಧಿಕಾರಿ ಶ್ರೀ ರಾಮಸ್ವಾಮಿ ಅಯ್ಯರ್, ಶ್ರೀ ನಿಟ್ಟೂರು ಶ್ರೀನಿವಾಸ ರಾಯರು, ಶ್ರೀ. ಜಿ. ನಾರಾಯಣ, ಡಾ. ಚಿದಾನಂದಮೂರ್ತಿ ಮೊದಲಾದ ಹಿರಿಯರು, ಗೆಳೆಯರು ಸಹಕಾರ ನೀಡಿದರು. ಶ್ರೀ ಎಚ್.ಜಿ. ಸೋಮಶೇಖರ ರಾಯರ ನೆರವಿನಿಂದ ಕೆನರಾ ಬ್ಯಾಂಕ್ ಒಂದು ಯೋಜನೆಗೆ ಹತ್ತು ಸಾವಿರ ರೂ.ಗಳನ್ನು ನೀಡಿತು. ಮಾರ್ಚ ೨೬–೨೭ ಆದರೂ ವಾರ್ಷಿಕ ಅನುದಾನ ಕೈಗೆ ಬಾರದೇ ಇದ್ದಾಗ ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರ ಮತ್ತು ಕಾರ್ಯದರ್ಶಿಗಳ ಕಚೇರಿಗಳಿಗೆ ಹೋದೆ. ಇಬ್ಬರೂ ನೆರವಾದರು. ಹಣ ಕೈಗೆ ಬಂದಿತು. ಶ್ರೀ ಎಂ.ವಿ.ಸೀ. ಅವರ ಮಕ್ಕಳ ನೆರವನ್ನು ಕಾರ್ಯ ಸಮಿತಿಯ ಸದಸ್ಯರ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಬೇಕು. ನಮ್ಮ ಸಂಪನ್ಮೂಲದ ಚೌಕಟ್ಟಿನಲ್ಲಿ ಹಲವು, ಸಾರ್ಥಕ ಕಾರ್ಯಕ್ರಮಗಳನ್ನು ನಡೆಸಿದೆವು. ಪುಸ್ತಕಗಳನ್ನು ಪ್ರಕಟಿಸಿದೆವು.

ಈಗ ಪ್ರತಿಷ್ಠಾನಕ್ಕೆ ಎರಡು ಅಂತಸ್ತುಗಳ ಸ್ವಂತ ಕಟ್ಟಡವಿದೆ. ಕಟ್ಟಡ ಇನ್ನು ಊರ್ಧ್ವಮುಖವಾಗಿದೆ. ಸರ್ಕಾರದಿಂದ ಐದು ಲಕ್ಷ ರೂಪಾಯಿಗಳ ಅನುದಾನದ ನೆರವಿದೆ. ಎಂ.ವಿ.ಸೀ. ಅವರ ಆಶಯದಂತೆ ಇಲ್ಲಿ ಉನ್ನತ ಅಧ್ಯಯನ ನಡೆಯುತ್ತಿದೆ. ಹಂಪೆಯ ಕನ್ನಡ ವಿಶ್ವವಿದ್ಯಾಲಯ ಇದನ್ನು ಸಂಶೋಧನೆಯ ಕೇಂದ್ರ ಎಂದು ಪರಿಗಣಿಸಿದೆ. ಎಂ.ಫಿಲ್ ಮತ್ತು ಪಿಎಚ್.ಡಿ. ಪದವಿಗಳಿಗೆ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಒಳ್ಳೆಯ ಗ್ರಂಥ ಭಂಡಾರವಿದೆ. ಇದರ ಭವಿಷ್ಯ ಬಹಳ ಆಶಾದಾಯಕವಾಗಿದೆ.

ಕನ್ನಡ ಸಾಹಿತ್ಯಕ್ಷೇತ್ರ ಕಂಡ ಅಪರೂಪದ ಗೌರವಪೂರ್ಣ ವ್ಯಕ್ತಿತ್ವದ ಸುಸಂಸ್ಕೃತ, ಸೌಜನ್ಯಪೂರ್ಣ, ಆದರಣೀಯ ವ್ಯಕ್ತಿಯೆಂದರೆ ಪ್ರೊ. ಎಲ್.ಎಸ್.ಎಸ್. ಎಂಬುದರಲ್ಲಿ ಯಾವ ಕನ್ನಡಿಗನಿಗೂ ಸಂದೇಹ ವಿರದು, ಅತ್ಯಂತ ಮೃದು ಸ್ವಭಾವದ, ಸ್ನೇಹಪೂರ್ಣ ನಡವಳಿಕೆಯ ಇವರನ್ನು ಕಂಡೊಡನೆಯೇ ಎಲ್ಲರಿಗೂ ಪೂಜನೀಯ ಭಾವನೆ ತುಂಬಿ ಬರುತ್ತದೆ. ಅನೈಚ್ಛಿಕವಾಗಿ ತಲೆ ಗೌರವದಿಂದ ಬಾಗುತ್ತದೆ. ಸರ್ವರನ್ನು ಆಕರ್ಷಿಸುವ ಚುಂಬಕ ಶಕ್ತಿ ಅವರ ಮುಗ್ಧ ಕಣ್ಣುಗಳಲ್ಲಿವೆ. ಮೃದುಮಾತಿನ ಸೊಗಡಿಗೆ ಮಾರು ಹೋಗದವರೇ ಇಲ್ಲ. ಇಂತಹ ಉದಾತ್ತ ವ್ಯಕ್ತಿತ್ವದ, ಆದರ್ಶ, ಅನುಕರಣೀಯ ವ್ಯಕ್ತಿಗೆ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಿರಿ ಲಭಿಸುವುದು ತೀರಾ ತಡವಾಯಿತಲ್ಲ ಎಂಬ ಅತೃಪ್ತಿ ಇದ್ದರೂ ಈಗ ಲಭಿಸಿತಲ್ಲಾ ಎಂಬ ಸಂತಸ ತೃಪ್ತಿ ತಂದಿದೆ.

ಅವರಿಗೆ ಪ್ರತಿಷ್ಠಾನದ ವತಿಯಿಂದ ಹಾಗೂ ಸಮಸ್ತ ಕನ್ನಡಿಗರ ಪರವಾಗಿ ಹಾರ್ದಿಕ ಶುಭಾಶಯ ಆಶಿಸಿ ಅಭಿನಂದಿಸಿ, ನಮಿಸಿ ಹೊರಬಂದೆವು. ❑

ಕರ್ನಾಟಕ ಲೇಖಕಿಯರ ಸಮ್ಮೇಳನಾಧ್ಯಕ್ಷೆ ನೀಳಾದೇವಿ ಕರೆ

ಕರ್ನಾಟಕ ಲೇಖಕಿಯರ ಸಂಘ ತನ್ನ ೬ನೇ ಸಾಹಿತ್ಯ ಸಮ್ಮೇಳನವನ್ನು ಮಂಡ್ಯದಲ್ಲಿ ೨೪ ಮತ್ತು ೨೫ ನವೆಂಬರ್ ೨೦೦೭ ನಡೆಸಿತು. ಲೇಖಕಿ ಶ್ರೀಮತಿ ನೀಳಾದೇವಿ ಅವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಲೇಖಕಿಯರ ಸಾಹಿತ್ಯ ಕೃಷಿಯ ಬಗ್ಗೆ ಹಲವಾರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

"ಮಹಿಳೆ ಜಗತ್ತಿನ ಜ್ಞಾನದ ಕಡೆ ಮುಖ ಮಾಡಿದ್ದಾಳೆ. ಆಕೆಯ ಎಲ್ಲಾ ಬರವಣಿಗೆಗಳು ಸಾಹಿತ್ಯ ರಚನೆಯನ್ನು ಜೀವಂತ ವಾಗಿಡುವುದರ ಜತೆಗೆ ಸಮಾಜಮುಖಿಯಾಗಿಯೂ ಇರಬೇಕು. ಅಶಾಂತತೆಯ ಸಮಾಜಕ್ಕೆ ಶಾಂತಿ ಸಂದೇಶಸಾರುವ ಮನೋಧರ್ಮ ಹಾಗೂ ಮಾನವೀಯತೆಯ ಗುಣಗಳನ್ನು ಸಾರಬೇಕು."

"ಇಂದಿನ ಸಮಾಜದಲ್ಲಿ ವಾಸ್ತವತೆಗೆ ಬೆಲೆಯೇ ಇಲ್ಲ. ಕೇವಲ ಕಾಲ್ಪನಿಕವಾಗಿ ಸೃಷ್ಟಿಸುವ ಕೃತಿ ಬಹಳ ದಿನ ಬದುಕಲಾರದು. ಆದ್ದರಿಂದ ವಾಸ್ತವತೆಗೆ ಮೆರಗು ನೀಡುವ ಕಲ್ಪನೆ ಮೇಳೈಸಿದಾಗ ಮಾತ್ರ ಉತ್ತಮ ಕೃತಿ ಸೃಷ್ಟಿಯಾಗಲು ಸಾಧ್ಯ. ಇದೇ ಜಗತ್ತಿನಲ್ಲಿ ಕ್ರೌರ್ಯ, ಅಶಾಂತಿ, ಜಾತಿಮತಗಳ ಅಂಧತೆಯ ಕೇಂದ್ರ ಬಿಂದುವಾದ ಹೆಣ್ಣನ್ನು ಪ್ರತಿಬಿಂಬಿಸುತ್ತಿದ್ದಾರೆ."

"ಈ ಹಿಂದೆ ಪಟ್ಟಣದವರಂತೆ ಹಳ್ಳಿಗಾಡಿನ ಹೆಣ್ಣುಮಕ್ಕಳು ಸಾಹಿತ್ಯಾಭ್ಯಾಸ ಮಾಡುತ್ತಿದ್ದರು. ಈಗೀಗ ಮಾಧ್ಯಮಗಳ ಭರಾಟೆಯಲ್ಲಿ ಅವರು ನಗರವಾಸಿಗಳಂತೆ ಆಗಿ ಬಿಟ್ಟಿದ್ದಾರೆ. ಅವರಲ್ಲಿ ಸಾಹಿತ್ಯದ ಆರಾಧನೆ ಇಂಗಿ ಹೋಗಿದೆ. ಹಿಂದೆ ಗ್ರಾಮೀಣ ಮಹಿಳೆಯ ಕೈಯಲ್ಲಿ ಲೇಖನಿ ಇರಲಿಲ್ಲವಾದರೂ ಮೌಖಿಕವಾಗಿ ಹಾಡಿ ಸಾಹಿತ್ಯ ಹಂಚುತ್ತಿದ್ದರು. ಕುಟ್ಟುವ, ಬೀಸುವ, ಸೋಬಾನೆ, ಹಸೆಮಣೆ, ಬೀಗರ ಹಾಡುಗಳು ಅವರ ದಿನಚರಿಯಲ್ಲಿ ಬೆರೆತು ಹೋಗುತ್ತಿತ್ತು, ಅವರ ಉಸಿರೇ ಸಾಹಿತ್ಯವಾಗಿತ್ತು. ಆಧುನಿಕ ದಿನಗಳಲ್ಲಿ ಅವರ ಸಾಹಿತ್ಯದ ಸೊಲ್ಲು ಎತ್ತದೆ ಹೋಗುತ್ತಿದೆ. ನಮ್ಮ ಸಂಸ್ಕೃತಿ ಸಂಸ್ಕಾರಗಳನ್ನು ಕಡೆಗಣಿಸಿ ಎಲ್ಲರೂ ಪಾಶ್ಚಾತ್ಯರ ಅನುಕರಣೆ ಮಾಡ ಹೊರಟರೆ ನಮ್ಮ ಸಂಸ್ಕೃತಿಯ ಬೇರಿನ ಮೂಲ ಮುರುಟಿ ಹೋಗುತ್ತದೆ".

ಪ್ರತಿಷ್ಠಾನದ ವಾರ್ತೆ

ದಿನಾಂಕ ೧-೭-೦೭ ಭಾನುವಾರ ೧೧-೦೦ ಗಂಟೆಗೆ ಪ್ರತಿಷ್ಠಾನದ ಕಲಾಭವನ ದಲ್ಲಿ ಎಂ.ಫಿಲ್. ವಿದ್ಯಾರ್ಥಿಗಳ ಪ್ರಗತಿ ಪರಿಶೀಲನಾ ಸಭೆ ಆಯೋಜಿಸಲಾಗಿತ್ತು. ಪ್ರೊ. ಚಿ. ಶ್ರೀನಿವಾಸರಾಜು ಅವರು ಅಧ್ಯಕ್ಷತೆ ವಹಿಸಿದ್ದರು. ಈ ಸಭೆಯಲ್ಲಿ ಎಂಟು ಜನ ಮಾರ್ಗದರ್ಶಕರು ಹಾಗೂ ೧೫ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಮಾರ್ಗದರ್ಶಕರು ವಿದ್ಯಾರ್ಥಿಗಳ ಪ್ರಗತಿಯನ್ನು ಪರಿಶೀಲಿಸಿ ಸೂಕ್ತ ಸಲಹೆಗಳನ್ನು ನೀಡಿದರು.

೧೨-೮-೦೭, ಭಾನುವಾರ : ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರ : ಸಹೃದಯ ಗೋಷ್ಠಿ – ತಿಂಗಳ ಸಾಹಿತ್ಯ ವೇದಿಕೆ – ಪಿಎಚ್.ಡಿ. ವಿದ್ಯಾರ್ಥಿಗಳ ಚರ್ಚಾಗೋಷ್ಠಿ ಕಾರ್ಯಕ್ರಮಗಳು ಪ್ರೊ. ಚಿ. ಶ್ರೀನಿವಾಸರಾಜು ಅವರ ಅಧ್ಯಕ್ಷತೆಯಲ್ಲಿ ನಡೆದವು. ವಿದ್ಯಾರ್ಥಿ ಶ್ರೀ ಎನ್. ಸುರೇಶ್ ಅವರು 'ಕನಕದಾಸ ಸಾಂಸ್ಕೃತಿಕ ಅಧ್ಯಯನ–ಕೆಲವು ಉದ್ದೇಶಗಳು' ಕುರಿತು ವಿಷಯ ಮಂಡಿಸಿದರು. ಶ್ರೀ ಪಿ.ಆರ್. ರೇಣುಕಾಪ್ರಸಾದ್ ಅವರು 'ಕವಿ ಗುಂಡಪ್ಪ ಮತ್ತು ಶಂಬಾ ಜೋಶಿಯವರ ಸಂಸ್ಕೃತಿ ಚಿಂತನೆಯ ಪಾತಳಿಗಳು– ತುಲನಾತ್ಮಕ ನೋಟ' ಎಂಬ ಬಗ್ಗೆ ವಿಷಯ ಮಂಡನೆ ಮಾಡಿದರು. ಪ್ರೊ. ನಾ. ಗೀತಾಚಾರ್ಯರು ಕಾರ್ಯಕ್ರಮ ನಿರೂಪಿಸಿ, ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

೯-೯-೦೭, ಭಾನುವಾರ : ಬೆಳಿಗ್ಗೆ ೧೦-೦೦ ಗಂಟೆಗೆ 'ಎಂ.ವಿ.ಸೀ. ಸಂಸ್ಮರಣೆ –ಎಂ.ವಿ.ಸೀ. ಪ್ರತಿಮೆಗೆ ಮಾಲಾರ್ಪಣೆ ಕಾರ್ಯಕ್ರಮ' ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಗೌರವಾಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರು ನೆರವೇರಿಸಿದರು. ಶ್ರೀ ವಿ.ಎಸ್. ಕೃಷ್ಣಯ್ಯರ್ (ಮಾಜಿ ಮಂತ್ರಿಗಳು ಹಾಗೂ ಹಿರಿಯ ಚಿಂತಕರು) ಎಂ.ವಿ.ಸೀ. ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅವರ ಕಾರ್ಯದಕ್ಷತೆಯನ್ನು ಪ್ರಶಂಸಿದರು. ಶ್ರೀ ಜಿ. ನಾರಾಯಣ ಅವರು ಅಧ್ಯಕ್ಷ ಭಾಷಣ ಮಾಡಿ ಎಂ.ವಿ.ಸೀ. ಅವರು ಈ ಸ್ಮಾರಕ ಪ್ರತಿಷ್ಠಾನ ಸ್ಥಾಪಿಸಲು ಪಟ್ಟ ಶ್ರಮವನ್ನು ಬಣ್ಣಿಸಿ ಅವರ ಕಾರ್ಯಕ್ಷಮತೆಯನ್ನು ಪ್ರಶಂಸಿದರು. ಪ್ರೊ. ಚಿ. ಶ್ರೀನಿವಾಸರಾಜು ಅಧ್ಯಕ್ಷತೆ ವಹಿಸಿದ್ದರು. ಈ ಮಾಲಾರ್ಪಣ ಕಾರ್ಯಕ್ರಮದ ನಂತರ ಶ್ರೀಮತಿ ಎಸ್. ಸರೋಜ ಶಿವಲಿಂಗಮ್ ಮತ್ತು ಸಂಗಡಿಗರು ಎಂ.ವಿ.ಸೀ. ಅವರ ಗೀತೆಗಳು ಹಾಗೂ ಜನಪದ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

ಪ್ರೊ. ನಾ. ಗೀತಾಚಾರ್ಯ ಅವರು ಸ್ವಾಗತ ಭಾಷಣ ಮಾಡಿ ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ಎಸ್.ವಿ. ಶ್ರೀನಿವಾಸರಾವ್ ಅವರು ವಂದನಾರ್ಪಣೆ ಮಾಡಿದರು.

೩೦-೯-೦೭ : ಪ್ರತಿಷ್ಠಾನದ ಸರ್ವಸದಸ್ಯರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಪ್ರೊ. ಚಿ. ಶ್ರೀನಿವಾಸರಾಜು ಅವರು ಅನಿವಾರ್ಯ ಕಾರ್ಯನಿಮಿತ್ತ ಬರಲಾಗದ್ದರಿಂದ ಗೌರವಾಧ್ಯಕ್ಷ ಶ್ರೀ ಜಿ. ನಾರಾಯಣ ವಹಿಸಿದ್ದರು. ಸಭೆಯಲ್ಲಿ ೪೩ ಜನ ಸದಸ್ಯರು ಭಾಗವಹಿಸಿದ್ದರು. ವಿಷಯಸೂಚಿಯಲ್ಲಿರುವಂತೆ ಎಲ್ಲಾ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಿದವು. ೨೦೦೬-೦೭ರ ಆಡಳಿತ ವರದಿಯನ್ನು ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ಎಸ್.ವಿ. ಶ್ರೀನಿವಾಸರಾವ್ ಓದಿದರು. ೨೦೦೬-೦೭ನೇ ಸಾಲಿನ ಲೆಕ್ಕಪತ್ರಗಳನ್ನು ಹಾಗೂ ೨೦೦೭-೦೮ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಕೋಶಾಧಿಕಾರಿಗಳಾದ ಶ್ರೀ ಎಸ್.ಬಿ. ರಾಧಾಕೃಷ್ಣ ಮಂಡಿಸಿದರು. ನಿಯಮಾನುಸಾರ ಕಾರ್ಯ ಸಮಿತಿಯಿಂದ ಸದಸ್ಯರ ಚುನಾವಣೆ ನಡೆದು ಐದು ವರ್ಷಗಳ ಹಿಂದೆ ಆಯ್ಕೆಯಾಗಿದ್ದ ಈ ಕೆಳಕಂಡ ಸದಸ್ಯರು ನಿವೃತ್ತರಾಗಬೇಕಾಗಿದೆಯೆಂದು ಕಾರ್ಯದರ್ಶಿಗಳು ಸಭೆಗೆ ತಿಳಿಸಿ ಸಂವಿಧಾನಾತ್ಮಕ ಅವರು ಮರು ಆಯ್ಕೆಗಳಾಗಬಹುದೆಂದೂ ತಿಳಿಸಿದರು. ಪ್ರೊ. ಜಿ. ಅಶ್ವತ್ಥ ನಾರಾಯಣ, ಶ್ರೀ ಎಸ್.ಟಿ. ರಾಧಾಕೃಷ್ಣ, ಎನ್. ಬಸವಾರಾಧ್ಯ, ಪ್ರೊ. ನಾ. ಗೀತಾಚಾರ್ಯ ಅವರನ್ನು ಮುಂದುವರಿಸಲು ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು. ಡಾ. ನಾ. ಸುಬ್ರಹ್ಮಣ್ಯ ಅವರು ಸದಸ್ಯತ್ವವನ್ನು ಬಿಟ್ಟುಕೊಡಲು ಕೋರಿದ್ದ ಹಿನ್ನೆಲೆಯಲ್ಲಿ ಅವರನ್ನು ಕಾರ್ಯಕಾರಿ ಸಮಿತಿ ಸದಸ್ಯತ್ವದಿಂದ ಬಿಟ್ಟುಕೊಡಲಾಯಿತು. ಪ್ರೊ. ಚಿ. ಶ್ರೀನಿವಾಸರಾಜು ಅವರನ್ನು ಡಾ. ಸುಬ್ರಹ್ಮಣ್ಯ ಅವರ ಸ್ಥಾನದಲ್ಲಿ ಆಯ್ಕೆ ಸದಸ್ಯರನ್ನಾಗಿ ಸಭೆ ಸರ್ವಾನುಮತದಿಂದ ಅಂಗೀಕರಿಸಿತು. ಲೆಕ್ಕ ಪರಿಶೋಧಕರಾದ ಶ್ರೀ ಎಸ್.ಆರ್.ಆರ್.ಕೆ. ಶರ್ಮ ಅವರು ಬಹಳ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಅವರನ್ನೇ ಮುಂದಿನ ಸಾಲಿಗೆ ಲೆಕ್ಕಪರಿಶೋಧಕರಾಗಿ ಮುಂದುವರಿಸಲು ಸಭೆ ಅನುಮೋದನೆ ನೀಡಿತು. ಪ್ರೊ. ಚಿ. ಶ್ರೀನಿವಾಸರಾಜು ಅವರು ಅಧ್ಯಕ್ಷ ಭಾಷಣ ಮಾಡುತ್ತ ಪ್ರತಿಷ್ಠಾನದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಎಲ್ಲರಿಗೂ ಕೃತಜ್ಞತೆ ಅರ್ಪಿಸಿದರು. ಪ್ರೊ. ಜಿ. ಅಶ್ವತ್ಥನಾರಾಯಣ ವಂದನಾರ್ಪಣೆ ಮಾಡಿದರು.

೬-೧೦-೦೭ ಶನಿವಾರ : ಸಂಜೆ ೬-೦೦ ಗಂಟೆಗೆ 'ಹಳಗನ್ನಡ ಕಾವ್ಯಾಭ್ಯಾಸ ಶಿಬಿರ'ದ ಸಮಾರೋಪ ಮತ್ತು ತಿಂಗಳ 'ಸಿರಿ ಸಂಗೀತ' ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಮಾರಂಭದಲ್ಲಿ ಭಾಗವಹಿಸಿದ್ದ ಹಿರಿಯ ವಿದ್ವಾಂಸ ಪ್ರೊ. ಎನ್. ಬಸವಾರಾಧ್ಯ ಅವರು ಹಳಗನ್ನಡ ಕಾವ್ಯಗಳ ಪುನರ್ ಅಧ್ಯಯನ ಆಗಬೇಕು ಎಂದು ಹೇಳಿ, ಬದಲಾದ ಕಾಲಕ್ಕೆ ತಕ್ಕಂತೆ ಹಳಗನ್ನಡ ಕಾವ್ಯ, ಭಾಷೆ, ವ್ಯಾಕರಣಗಳನ್ನು ಅಭ್ಯಾಸ ಮಾಡಬೇಕು. ಈ ಮೂಲಕ ಆಧುನಿಕ ಪ್ರವಾಹದಲ್ಲಿ ಕೊಚ್ಚಿಹೋಗುವ ಹಳಗನ್ನಡ, ಸಂಸ್ಕೃತಿ ಉಳಿಸಬೇಕು ಎಂದರು

ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಚಿ. ಶ್ರೀನಿವಾಸರಾಜು ಅಧ್ಯಕ್ಷತೆ ವಹಿಸಿದ್ದರು. ವಿದ್ವಾಂಸ ಡಾ. ಪಿ.ವಿ. ನಾರಾಯಣ, ಡಾ. ನ. ಸುಬ್ರಹ್ಮಣ್ಯ, ಪ್ರೊ. ಜಿ. ಅಶ್ವತ್ಥನಾರಾಯಣ, ಪ್ರೊ. ನಾ. ಗೀತಾಚಾರ್ಯ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಶಿಬಿರಾರ್ಥಿಗಳಿಂದ 'ಸಿರಿ ಸಂಗೀತ'ದಲ್ಲಿ ಕನ್ನಡ ಗೀತೆಗಳ ಗಾಯನ ಹಾಗೂ ಅನುಭವದ ಮಾತುಗಳಿದ್ದವು. ಶಿಬಿರಾರ್ಥಿಗಳೇ ಕಾರ್ಯಕ್ರಮ ನಡೆಸಿಕೊಟ್ಟರು.

ಡಾ. ಕೆ.ಆರ್. ಗಣೇಶ್‌ರವರು ಕಾರ್ಯಕ್ರಮ ಸ್ವಾಗತಿಸಿದರು. ಪ್ರೊ. ನಾ. ಗೀತಾಚಾರ್ಯ ವಂದನಾರ್ಪಣೆ ಮಾಡಿದರು.

೧೧-೧೦-೦೭ ಗುರುವಾರ ಸಂಜೆ ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರದ ಉದ್ಘಾಟನೆ ಹಾಗೂ ೨೦೦೭-೦೮ನೇ ಸಾಲಿನ ಎಂ.ಫಿಲ್. ತರಗತಿಗಳ ಉದ್ಘಾಟನೆ ಕಾರ್ಯಕ್ರಮ ಪ್ರೊ. ಚಿ. ಶ್ರೀನಿವಾಸರಾಜು ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಡಾ. ಎಚ್.ಎಸ್. ರಾಘವೇಂದ್ರರಾವ್, ಡಾ. ಕೆ.ಪಿ. ಭಟ್, ಡಾ. ಕೆ.ಆರ್. ಗಣೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಪ್ರೊ. ಡಿ. ಲಿಂಗಯ್ಯ, ಪ್ರೊ. ಹೆಚ್.ವಿ. ಮುರಳೀಧರ ಮತ್ತು ಡಾ. ಪಿ.ವಿ. ನಾರಾಯಣ ಆಗಮಿಸಿದ್ದರು. ಪ್ರೊ. ಗೀತಾಚಾರ್ಯ ಸ್ವಾಗತ ಹಾಗೂ ವಂದನಾರ್ಪಣೆ ಕಾರ್ಯಕ್ರಮವನ್ನು ನೆರವೇರಿಸಿದರು.

೧೪-೧೦-೦೭ ಭಾನುವಾರ : ಸಂಜೆ ೫-೩೦ ಗಂಟೆಗೆ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ವತಿಯಿಂದ ಸಹೃದಯಗೋಷ್ಠಿ ಆಯೋಜಿಸಲಾಗಿತ್ತು. ಪಿಎಚ್.ಡಿ. ವಿದ್ಯಾರ್ಥಿಗಳಾದ ಶ್ರೀ ಹಾಲಪ್ಪ ಅವರ 'ಜನಪರ ವೈದ್ಯದಲ್ಲಿ ಗುರುಪರಂಪರೆ', ಕುಮಾರಿ ಹೇಮಾವತಿ ಅವರು 'ಚಂದ್ರಶೇಖರ ಕಂಬಾರರ ನಾಟಕಗಳಲ್ಲಿ ಗಂಡುಹೆಣ್ಣಿನ ಸಂಬಂಧ' ಪ್ರಬಂಧಗಳನ್ನು ಮಂಡಿಸಿದರು. ಪ್ರೊ. ಚಿ. ಶ್ರೀನಿವಾಸರಾಜು,

ಪ್ರೊ. ನಾ. ಗೀತಾಚಾರ್ಯ ಹಾಗೂ ಎಸ್.ವಿ. ಶ್ರೀನಿವಾಸರಾವ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪುಸ್ತಕೋತ್ಸವ : ಬೆಂಗಳೂರು ಪುಸ್ತಕ ಮತ್ತು ಪ್ರಕಾಶಕರ ಸಂಘ ಅರಮನೆ ಮೈದಾನದಲ್ಲಿ ಆಯೋಜಿಸಿರುವ ಪುಸ್ತಕೋತ್ಸವದಲ್ಲಿ ಪ್ರತಿಷ್ಠಾನದ ಪ್ರಕಟಣೆಗಳನ್ನು ಮಾರಾಟಕ್ಕೆ ಇರಿಸಲಾಗಿತ್ತು. ಸುಮಾರು ಐವತ್ತು ಕನ್ನಡ ಪುಸ್ತಕಗಳ ಮಳಿಗೆ ಇರುವುದು ಪುಸ್ತಕೋತ್ಸವದ ವೈಶಿಷ್ಟ್ಯವಾಗಿದೆ. ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಪುಸ್ತಕ ಮಳಿಗೆಗಳಿಗೆ ಒಂದು ಲಕ್ಷ ರೂಪಾಯಿಯನ್ನು ಸಹಾಯಧನ ರೂಪದಲ್ಲಿ ವಿನಿಯೋಗಿಸುತ್ತಿದೆ. ಪುಸ್ತಕೋತ್ಸವದಲ್ಲಿ ಎಲ್ಲಾ ಭಾಷೆಗಳ ಮಳಿಗೆಗಳಿದ್ದು, ಅಪಾರ ಜನರನ್ನು ಆಕರ್ಷಿಸಿತ್ತು. ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದ್ದು ಜನಮೆಚ್ಚುಗೆಗೆ ಪಾತ್ರವಾಯಿತು.

'ಬಿ.ಎಂ.ಶ್ರೀ. ಸ್ಮೃತಿ – ಅನುವಾದಿತ ಕವನ ಸ್ಪರ್ಧೆ ೨೦೦೭': ಪ್ರತಿಷ್ಠಾನವು ಈ ವಿಶೇಷ ಕಾರ್ಯಕ್ರಮವನ್ನು ಬಿ.ಎಂ.ಶ್ರೀ. ಅವರ ನೆನಪಿಗಾಗಿ ಪ್ರತಿವರ್ಷವೂ ನಡೆಸಲು ಉದ್ದೇಶಿಸಿದ್ದು ಈ ವರ್ಷದಿಂದ ಕಾರ್ಯಾರಂಭ ಮಾಡಿಲಿದೆ. ಈ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು, ಎಲ್ಲಾ ಪತ್ರಿಕೆಗಳಿಗೆ ಹಾಗೂ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಕಳುಹಿಸಿಕೊಡಲಾಗಿದೆ. ಕವನಗಳನ್ನು ವಿದ್ಯಾರ್ಥಿಗಳಿಂದ ಸ್ವೀಕರಿಸಲು ಕೊನೆಯ ದಿನ ೩೧-೧೦-೦೭ ಎಂದು ನಿರ್ಧರಿಸಲಾಗಿದೆ. ❑

ಅಭಿನಂದನೆಗಳು

- **'ಭಾಷಾ ಸಮ್ಮಾನ್ ಪ್ರಶಸ್ತಿ'** : ಖ್ಯಾತ ಲೇಖಕ ಡಾ. ಹಂ.ಪ. ನಾಗರಾಜಯ್ಯ ಅವರಿಗೆ ಜೈನ ಮತ್ತು ಪುರಾತನ ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೊಡುಗೆಗಳನ್ನು ಪರಿಗಣಿಸಿ ೨೦೦೬ನೇ ಸಾಲಿನ ಸಾಹಿತ್ಯ ಕಲಾ ಅಕಾಡೆಮಿ ಕೊಡಮಾಡುವ ಈ ಪ್ರಶಸ್ತಿಯನ್ನು ಆಗಸ್ಟ್ ೧೨, ೨೦೦೭ರಂದು ಹೈದರಾಬಾದಿನಲ್ಲಿ ವಿತರಿಸಲಾಗಿದೆ. **'ಬಸವ ಪುರಸ್ಕಾರ'** : ಕರ್ನಾಟಕ ಸರ್ಕಾರದ ಪ್ರತಿಷ್ಠಿತ 'ಬಸವ ಪುರಸ್ಕಾರ' ೨೦೦೬ವನ್ನು ರಾಷ್ಟ್ರದ ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಗೆ ನೀಡಿ ಪುಸ್ಕರಿಸಿದೆ. (೨೮-೯-೦೭).
- **ರಮಣಶ್ರೀ ಶರಣ ಪ್ರಶಸ್ತಿ** : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ರಮಣಶ್ರೀ ಪ್ರತಿಷ್ಠಾನ ನೀಡುವ ಪ್ರಶಸ್ತಿ ಪ್ರೊ. ಡಿ. ಲಿಂಗಯ್ಯ (ಸಾಹಿತ್ಯ); ಡಾ. ಬಿ.ವಿ. ಮಲ್ಲಾಪುರ (ಸಾಹಿತಿ); ಪಂಡಿತ ವೆಂಕಟೇಶಕುಮಾರ್ (ಗಾಯಕ); ಶ್ರೀ ಬಿ.ಎಲ್. ಪಾಟೀಲ (ಅಥಣಿಯ ವಿಮೋಚನಾ ಸಂಸ್ಥೆ) ಅವರುಗಳಿಗೆ ಸಂದಿದೆ.
- **'ಕನ್ನಡ ವಿಜ್ಞಾನ ಪರಿಷತ್ ರಜತೋತ್ಸವ ಪ್ರಶಸ್ತಿ'** : ಕೊರವಂಜಿ – ಅಪರಂಜಿ ಟ್ರಸ್ಟ್‌ಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. ಅಪರಂಜಿ ಸಂಪಾದಕ ಶ್ರೀ ಎಂ. ಶಿವಕುಮಾರ್ ಅವರಿಗೆ ಪ್ರಶಸ್ತಿ ಮೊಬಲಗು ರೂ. ೨೫೦೦೦/– ಹಾಗೂ ಸ್ಮರಣಿಕೆಯನ್ನು ನೀಡಲಾಗಿದೆ.
- **ರಾಜ್ಯೋತ್ಸವ ಪ್ರಶಸ್ತಿ** : ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾಗಿರುವ ಪ್ರೊ. ಚಿ. ಶ್ರೀನಿವಾಸರಾಜು ಅವರಿಗೆ ೨೦೦೭ನೇ ಸಾಲಿನ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿ ಲಭಿಸಿರುತ್ತದೆ.
- **ಅಮ್ಮ ಪ್ರಶಸ್ತಿ** : ಕವಿಯತ್ರಿ ಬಿ.ಸಿ. ಶೈಲಾನಾಗರಾಜ್ ಅವರ 'ಬಯಲು ಮತ್ತು ಏಕಾಂತ' ಕೃತಿಗೆ ಅಮ್ಮ ಪ್ರಶಸ್ತಿ ಲಭಿಸಿದೆ.
- **ಪ್ರೊ॥ ಹೀ.ಚಿ. ಬೋರಲಿಂಗಯ್ಯ**: ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಪ್ರಭಾರ ಕುಲಪತಿಯಾಗಿ ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ॥ ಹೀ.ಚಿ. ಬೋರಲಿಂಗಯ್ಯಅವರು ನೇಮಕಗೊಂಡಿದ್ದಾರೆ.
- **ಮನುಬಳಿಗಾರ**: ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿ, ಸಾಹಿತಿ ಶ್ರೀ ಮನುಬಳಿಗಾರ ಅವರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾಗಿ ನಿಯುಕ್ತರಾಗಿದ್ದಾರೆ.

ಮೇಲ್ಕಂಡ ಎಲ್ಲಾ ಸನ್ಮಾನ್ಯರುಗಳಿಗೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಹಾರ್ದಿಕ ಅಭಿನಂದನೆಯೊಡನೆ ಶುಭಾಶಯ ಕೋರುತ್ತದೆ.

ಶ್ರದ್ಧಾಂಜಲಿ

- **ಪ್ರೊ. ಎಚ್.ಜಿ. ಸಣ್ಣಗುಡ್ಡಯ್ಯ** (೭೩), (೧-೮-೧೯೩೪ – ೧೭-೯-೨೦೦೭) ಜನನ ಶಿರಾ ತಾಲ್ಲೂಕು ಹೊಸಹಳ್ಳಿಯಲ್ಲಿ. ಖ್ಯಾತ ಪ್ರಬಂಧಕಾರರಾಗಿದ್ದ ಶ್ರೀಯುತರು ತುಮಕೂರಿನಲ್ಲಿ ೧೭-೯-೦೭ರಂದು ನಿಧನರಾದರು. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು 'ಹದ್ದು ಮತ್ತು ಇತರ ಪ್ರಬಂಧಗಳು (೧೯೯೮)', ಏಕಾಂತ ಮತ್ತು ಇತರ ಪ್ರಬಂಧಗಳು (೧೯೯೩)' ಕೃತಿಗಳಿಗೆ ಲಭಿಸಿವೆ. ಇತರ ಕೃತಿಗಳು ಪಾರಿಜಾತ, ಪ್ರಣಯಗೀತೆಗಳು (ಕವಿತಾ ಸಂಗ್ರಹಗಳು), ಅಭೀಪ್ಸೆ, ಪ್ರತಿಮಾ, ರಾಜ್ಯಶಾಸ್ತ್ರ, ಮುಂತಾದವು.
- **ಕವಿ ವಿ. ಚಿಕ್ಕವೀರಯ್ಯ** (೧೯೩೦-೨೯-೯-೨೦೦೭) ತುಮಕೂರು ನಗರದ ಚಿಕ್ಕವೀರಯ್ಯನ ಪಾಳ್ಯದಲ್ಲಿ ಜನಿಸಿದ ಶ್ರೀಯುತರು ಕವಿಯಾಗಿ, ಪ್ರಬಂಧಕಾರರಾಗಿ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಗಳಿಸಿದ್ದರು. ೧೯೯೪ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಇವರಿಗೆ ಗೌರವ ಪ್ರಶಸ್ತಿ ನೀಡಿ ಪುರಸ್ಕರಿಸಿತ್ತು. ತುಮಕೂರು ಪುರಸಭೆಯ ಅಧ್ಯಕ್ಷ/ಉಪಾಧ್ಯಕ್ಷರಾಗಿದ್ದ ಹೆಗ್ಗಳಿಕೆ ಇವರದು. ಇವರು ರಚಿಸಿದ ಇತರ ಕೃತಿಗಳು : ಪ್ರಣಯ ಚೈತ್ರ, ವಿಷಾದನಕ್ಷೆ, ಸಂಕರತಳಿ, ನವಿಲುಮನೆ (ಕವನ ಸಂಗ್ರಹಗಳು), ಅಭಿನಯದ ಬಯಲು, ನಿತ್ಯ ಮಧುವಣಗಿತ್ತಿ, ಇವರು ನನ್ನವರು, ಸಿದ್ಧರಬೆಟ್ಟ ಮುಂತಾದವು ಇತರ ಕೃತಿಗಳು.
- **ಎನ್.ಎಸ್. ಚಂದ್ರಶೇಖರ್**: ನಿವೃತ್ತ ಮುಖ್ಯ ನ್ಯಾಯಮೂರ್ತಿ ದಿ. ನಿಟ್ಟೂರು ಶ್ರೀನಿವಾಸರಾಯರ ಜೇಷ್ಠ ಪುತ್ರ, ಶ್ರೀ ಎನ್.ಎಸ್. ಚಂದ್ರಶೇಖರ್ ಅವರು ಇತ್ತೀಚೆಗೆ ನಿಧನರಾದರು.
- **ಆರ್. ನಿರ್ಮಲ** : ಲೇಖಕಿ, ನಿವೃತ್ತ ಪ್ರಾಧ್ಯಾಪಕಿ, ದಿವಂಗತ ಪ್ರೊ॥ ರಾಮದಾಸ್ ಅವರ ಪತ್ನಿ ೨೪ ನವೆಂಬರ್ ೨೦೦೭ ರಂದು ಮೈಸೂರಿನಲ್ಲಿ ತಮ್ಮ ಸ್ವಗೃಹ 'ಚಾರ್ವಾಕ'ದಲ್ಲಿ ನಿಧನ ಹೊಂದಿದರು. ನಿರ್ಮಲ ಅವರಿಗೆ ಅರವತ್ತು ವರ್ಷವಾಗಿತ್ತು ಅವರ 'ಚೆಲ್ ಮೇರಿ ಲೂನ' ಕೃತಿಗೆ ೧೯೯೭ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತ್ತು. 'ಪಚ್ಚೆಪೈರು' 'ಉರಿವ ಒಲೆಗಳ ಮೇಲೆ' 'ಕಾಕಚ್ಚ' ಅವರ ಇತರೆ ಕೃತಿಗಳು.
- **ಶ್ಯಾಮ ಹುವ್ವಾರ**: ಹನಿ ಕವಿತೆಗಳನ್ನು ಸಾಕಷ್ಟು ರಚಿಸಿದ್ದರು. ಒಳ್ಳೆಯ ಹೆಸರು ಮಾಡಿದ್ದರು. ಇತ್ತೀಚೆಗೆ ತೀರಿಕೊಂಡರು.

ಮೇಲ್ಕಂಡ ಎಲ್ಲಾ ದಿವಂಗತರುಗಳಿಗೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಗೌರವಪೂರ್ವಕವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ.

ಪುಸ್ತಕ ಪರಿಚಯ



'ಕಾವೇರಿ ಕಣಿವೆಯ ಸ್ವರ್ಗ (ಐತಿಹಾಸಿಕ – ಕಾದಂಬರಿ)
ಲೇ: ಆದ್ಯರಾಮಾಚಾರ್ಯ
ಪ್ರ: ವರದರಾಜ ಪ್ರಕಾಶನ, ೧೪೪೪/ವೈ, ಭೀಮರಥಿ
೪ನೇ ಮುಖ್ಯರಸ್ತೆ, ೪ನೇ ಘಟ್ಟ, ೭ನೇ ವಿಭಾಗ
ಬನಶಂಕರಿ ೩ನೇ ಹಂತ, ಬೆಂಗಳೂರು – ೮೫
ಪ್ರ. ವರ್ಷ: ೨೦೦೬, ಬೆಲೆ: ರೂ. ೨೫೦/–,
ಪು: xviii + 254.

ಕಾವೇರಿ ಕಣಿವೆಯ ಸ್ವರ್ಗ – ಈ ಗ್ರಂಥವು ತಂಜಾವೂರಿನಲ್ಲಾಳಿದ ಭೋಸಲೆ ಮನೆತನಕ್ಕೆ ಸಂಬಂಧಿಸಿದ ಕಥಾನಕವನ್ನು ನೀಡುತ್ತದೆ. ಛತ್ರಪತಿ ಶಿವಾಜಿ ಮಹಾರಾಜರ ಜೀವನ ಚರಿತ್ರೆ 'ರಾಜಯೋಗಿ'ಯಂಥ ಬೃಹತ್ ಗ್ರಂಥವನ್ನು ರಚಿಸಿರುವ ಶ್ರೀ ಆದ್ಯರಾಮಾಚಾರ್ಯರು ಈ ಕೃತಿಯಲ್ಲಿ ಶಹಾಜಿಯ ಮಕ್ಕಳು ಹಾಗೂ ಶಿವಾಜಿಯ ಮಲಸೋದರ ರಾಜ್ಯವಾದ ಭೋಸಲೇ ಮನೆತನದವರ ಇತಿಹಾಸವನ್ನು ಈ ವಿಶಿಷ್ಟಕೃತಿಯಲ್ಲಿ ಚಿತ್ರಿಸಿದ್ದಾರೆ. ಛತ್ರಪತಿ ಶಿವಾಜಿಯ ಮಲತಮ್ಮ ವೆಂಕೋಜಿರಾಜನು ತಂಜಾವೂರನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡು ದೂರದ ತಮಿಳುನಾಡಿನಲ್ಲಿದ್ದು ಕೊಂಡೇ ರಾಜ್ಯಾಡಳಿತವನ್ನು ನಡೆಸುತ್ತಾನೆ. ಈ ಕಾದಂಬರಿಯು ಶಿವಾಜಿಯ ಜೀವನ ವೃತ್ತದಿಂದ ಪ್ರಾರಂಭವಾಗುತ್ತದೆ. ಈತನ ವಂಶಜರು ಕರ್ನಾಟಕದವರು ಎಂಬುದನ್ನು ಲೇಖಕರು ಆಧಾರಗಳಿಂದ ದೃಢೀಕರಿಸುತ್ತಾರೆ. ವೆಂಕೋಜಿರಾಜನ ಮನೆತನದವರು ಸುಮಾರು ನೂರು ವರ್ಷ ರಾಜ್ಯವಾಳಿ ಕೊಂಡಿದ್ದು ಆಂಗ್ಲರ ಪ್ರಭಾವದಿಂದ ಅಸ್ತಿತ್ವವನ್ನು ಕಳೆದುಕೊಂಡರು. ಬೃಹದೇಶ್ವರ ದೇವಾಲಯ ಶಿಲಾಲೇಖವೊಂದರಲ್ಲಿ ವೆಂಕೋಜಿಯ ಸಾಂಸಾರಿಕ ವಿವರಗಳಿವೆ. ಚಾರಿತ್ರಿಕ ಹಿನ್ನೆಲೆಯನ್ನು ಕರಾರುವಾಕ್ಕಾಗಿ ದಾಖಲಿಸಿರುವ ಈ ಕೃತಿ ಮಹತ್ವದ್ದೆನಿಸುತ್ತದೆ. ಸಂಗ್ರಹ ಯೋಗ್ಯವಾಗಿದೆ. ಲೇಖಕರು ಅಭಿನಂದನಾರ್ಹರಾಗಿದ್ದಾರೆ.



ಮಕ್ಕಳ ಸಾಹಿತ್ಯದಲ್ಲಿ ನೆಲೆ – ಬೆಲೆ
(ಲೇಖನಗಳ ಸಂಗ್ರಹ)
ಲೇ: ಎಸ್.ವಿ. ಶ್ರೀನಿವಾಸರಾವ್
ಪ್ರ. ವರ್ಷ: ೨೦೦೬
ಪು: viii + 142, ಬೆಲೆ: ರೂ. ೪೫/–



ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
(೧೯೧೫ ರಿಂದ ೨೦೦೬)
ಲೇ: ಎಸ್.ವಿ. ಶ್ರೀನಿವಾಸರಾವ್
ಪ್ರ. ವರ್ಷ: ೨೦೦೬, ಪು: xiii + 141,
ಬೆಲೆ: ರೂ. ೭೦/–
ಈ ಮೇಲ್ಕಂಡ ಎರಡೂ ಪುಸ್ತಕಗಳ ಪ್ರಕಾಶಕರು
ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ,
ಬೆಂಗಳೂರು–೧೮.

ಮೊದಲನೆ ಕೃತಿಯಲ್ಲಿ ಮಕ್ಕಳ ಸಾಹಿತ್ಯದ ಉಗಮ, ಬೆಳವಣಿಗೆ, ಮಕ್ಕಳ ಸಾಹಿತ್ಯದ ಪಾತ್ರ, ಸ್ಥಿತಿ–ಗತಿ, ಮಕ್ಕಳ ಸಾಹಿತ್ಯ ಸಂಪನ್ನಗೊಳಿಸಿರುವ, ಗೊಳಿಸುತ್ತಿರುವ ಸಾಹಿತಿಗಳು, ಶಿಕ್ಷಕರು, ಮಹಿಳೆಯರು, ಮುಂತಾದವರುಗಳ ಕಿರು ಚಿತ್ರಣಗಳು ಈ ಕೃತಿಯಲ್ಲಿ ಚಿತ್ರಿತಗೊಂಡಿದೆ. ಈ ಕೃತಿ ಸಾಹಿತ್ಯಾಸಕ್ತರಿಗೆ ಅತ್ಯಂತ ಉಪಯುಕ್ತವಾಗಿದೆ. ಒಂದೇ ಕೃತಿಯಲ್ಲಿ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದ ಸಮಗ್ರ ಮಾಹಿತಿ ಲಭ್ಯವಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ಎರಡನೆಯ ಕೃತಿಯಲ್ಲಿ ೧೯೧೫ರಿಂದ ೨೦೦೬ರ ವರೆಗಿನ ೭೧ (ಎಪ್ಪತ್ತೊಂದು) ಅಖಿಲ ಭಾರತ ಸಾಹಿತ್ಯ ಸಮ್ಮೇಳನಾಧ್ಯಕ್ಷರುಗಳ ಕಿರುಚಿತ್ರಣದ ಜೊತೆಯನ್ನು ಅವರು ಸಮ್ಮೇಳನದಲ್ಲಿ ಮಾಡಿದ ಭಾಷಣದ ಮುಖ್ಯಾಂಶ ಸಹ ಇರುತ್ತದೆ.



ಸಂ – ಗ್ರಾಮ (ಲೇಖನಗಳ ಸಂಗ್ರಹ)
ಲೇ: ಶ್ರೀ ರು.ಸು. ಭಾಸ್ಕರ ಅವಧಾನಿ
ಪ್ರ: ರುದ್ರಪಟ್ಟಣ ಸಂಗೀತೋತ್ಸವ ಸಮಿತಿ ಟ್ರಸ್ಟ್ (ರಿ)
ಬೆಂಗಳೂರು
ಪ್ರ. ವರ್ಷ: ೨೦೦೬
ಪು: xiv + 118, ಬೆಲೆ : ರೂ. ೯೦/–

ಸಾಹಿತ್ಯ, ವೇದಾಧ್ಯಯನ, ಸಂಗೀತ, ಗಮಕಕಲೆ, ಮುಂತಾದ ವಿಶಿಷ್ಟ ಕ್ಷೇತ್ರಗಳಲ್ಲಿ ತಮ್ಮದೇ ವೈಶಿಷ್ಟ್ಯ ಸ್ಥಾನವನ್ನು ಗಳಿಸಿಕೊಂಡಿರುವ 'ಸಂಕೇತಿ' ಸಮುದಾಯದ ವೈಭವದ ದಿನಚರಿಯನ್ನು ಪ್ರತಿಮಿಸುವ ಈ ಕೃತಿ ಯಶಸ್ವಿಯಾಗಿದೆ.

'ಇಂಥ ಒಳ್ಳೆಯ ಕೃತಿಯೊಂದನ್ನು ರಚಿಸಿ, ನಮಗೆ ನೀಡಿರುವ ಶ್ರೀಅವಧಾನಿಗಳು ಅಭಿನಂದನಾರ್ಹರಾಗಿದ್ದಾರೆ' ಎಂದು ನುಡಿ ತೋರಣ ಕಟ್ಟಿರುವ ಡಾ॥ ತಾಳ್ತಜೆ ವಸಂತ ಕುಮಾರ ಅವರ ಅಭಿಪ್ರಾಯಕ್ಕೆ ಎಲ್ಲರೂ ದನಿಗೂಡಿಸುವುದರಲ್ಲಿ ಸಂದೇಹವಿಲ್ಲ. ಇದೊಂದು ಸಂಗ್ರಹಯೋಗ್ಯ ಕೃತಿ. ಮತ್ತೆ ಮತ್ತೆ ಓದಬೇಕೆನ್ನಿಸುವ ಪುಸ್ತಕ.



ಕನ್ನಡ ಸಪ್ತ ಶೃಂಗಗಳು
(ಜ್ಞಾನಪೀಠ ಪ್ರಶಸ್ತಿ ವಿಜೇತರ ವ್ಯಕ್ತಿ ಚಿತ್ರ)
ಸಂ.: ಮುಂಬೆಳಗು ಕನ್ನಡ ಬಳಗ
ಪ್ರ.: ಮುಂಬೆಳಕು ಕನ್ನಡ ಬಳಗ. ೨೦೩/ಡಿ–೬,
ಹಿಮಗಿರಿ ಹೌಸ್, ಲೋಕಧಾರಾ ಕಲ್ಯಾಣ (ಪೂ), ಥಾಣಾ
ಜಿಲ್ಲೆ – ೪೨೧ ೩೦೬
ಪ್ರ. ವರ್ಷ: ೨೦೦೫, ಪು: xvi + 120, ಬೆಲೆ: ರೂ. ೭೫/–

ಕನ್ನಡ ಸಪ್ತಶೃಂಗಗಳು ಅಂದರೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಏಳು ಮಂದಿ ಧೀಮಂತ ಸಾಹಿತ್ಯ ಶ್ರೇಷ್ಠರು. ಈ ದಿಗ್ಗಜರನ್ನು ಕನ್ನಡ ಸಾಹಿತ್ಯ ಕ್ಷೇತ್ರದ ಖ್ಯಾತ ನಾಮರಾದ ಡಾ॥ ಕೆ. ರಘುನಾಥ್, ಸುಮನ್ ಚಿಪ್ಳೂಣಕರ್ ವಿದ್ಯಾಧರ ಮುತಾಲಿಕ ದೇಸಾಯಿ ಮಮತಾರಾವ್, ಸುಮಾ ದ್ವಾರಕಾನಾಥ್, ಡಾ॥ ಗಿರಿಜಾ ಶಾಸ್ತ್ರಿ, ಡಾ॥ ಜಿ.ಎನ್. ಉಪಾಧ್ಯ, ಡಾ॥ ಕೆ. ರಘುನಾಥ್ ಮತ್ತು ರೇಖಾ ಎನ್.ವಿ. ಜ್ಞಾನಪೀಠ ಪ್ರಶಸ್ತಿಯ ಮಹತ್ವ ಹಾಗೂ ಪ್ರಶಸ್ತಿ ಪುರಸ್ಕೃತರ ಸಾಹಿತ್ಯ ವೈಶಿಷ್ಟ್ಯತೆಯನ್ನು ವಿವಿಧ ಲೇಖಕರು ತಮ್ಮದೇ ಆದ ಶೈಲಿಯಾಗಿ ದಾಖಲಿಸಿದ್ದಾರೆ. ಇದು ವಿದ್ಯಾರ್ಥಿಗಳಿಗಲ್ಲದೆ ಎಲ್ಲಾ ಸಾಹಿತ್ಯಾಸಕ್ತರಿಗೂ ಉಪಯುಕ್ತವಾಗುವ ಕೃತಿ.

ಈ ಕೃತಿಯಲ್ಲಿನ ಇನ್ನೊಂದು ವೈಶಿಷ್ಟ್ಯತೆಯೆಂದರೆ ಎಲ್ಲಾ ಭಾಷೆಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ರಚಿಸಿರುವ ಕೃತಿಗಳ ಹೆಸರೂ ದಾಖಲಾಗಿವೆ.

ಈ ಮಹತ್ವದ ಕೃತಿ, ಸಮ್ಮೇಳನದಲ್ಲಿ (೭೩ನೇ ಸಮ್ಮೇಳನ, ಶಿವಮೊಗ್ಗ) ಬಿಡುಗಡೆಗೊಂಡಿದೆ. 'ಕನ್ನಡನಾಡು, ನುಡಿ, ಸಂಸ್ಕೃತಿ ಬಗ್ಗೆ ಅಭಿಮಾನಿಗಳಾದ, ಸಹೃದಯ ಕನ್ನಡಿಗರು, ಪ್ರೀತಿಯಿಂದ ಇವನ್ನು ಸ್ವಾಗತಿಸುತ್ತಾರೆ' ಎನ್ನುವ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಮಾತು ಉಲ್ಲೇಖನೀಯ. ಈ ಮಾತು ಕೃತಿಯ ಮಹತ್ವ/ಸತ್ವವನ್ನು ಪ್ರತಿನಿಧಿಸುತ್ತದೆ.



ಗುರಿ (ಸಾಮಾಜಿಕ ಕಾದಂಬರಿ)
ಲೇ: ಶ್ರೀಮತಿ ರಾಜಾಮಣಿ ನಾಗರಾಜರಾವ್
ಪ್ರ: ಶ್ರೀಕಾಂತ್ರ ಪ್ರಕಾಶನ, ೯೩೩, ೧೨ನೇ ಕ್ರಾಸ್
ಗಿರಿನಗರ, ೩ನೇ ಹಂತ, ಬೆಂಗಳೂರು - ೮೫
ಪ್ರ. ವರ್ಷ: ೨೦೦೬, ಪು: xii + 430, ಬೆಲೆ ೨೦೦/-

ಜ್ಯೋತಿಷ್ಯ ವಿದ್ವಾನ್ ಬಿ.ಎಲ್. ನರಸಿಂಹಶಾಸ್ತ್ರಿಗಳ ಪುತ್ರಿಯಾದ ಶ್ರೀಮತಿ ರಾಜಾಮಣಿಯವರಿಂದ ಜ್ಯೋತಿಷ್ಯ, ಸಂಗೀತ, ನೃತ್ಯಕ್ಕೆ ಸಂಬಂಧಿಸಿದ ವಸ್ತುವನ್ನು ಆಧರಿಸಿ ಈ ಕೃತಿ ರಚಿತಗೊಂಡಿದೆ. ಕುಜದೋಷವಿರುವ ಹೆಣ್ಮಗಳ ಮದುವೆಗಾಗಿ ತಂದೆ ತಾಯಿ ಪಡುವ ಭವಣೆಯೇ ಕಾದಂಬರಿಯ ಮೂಲವಸ್ತು. ಪಾತ್ರಗಳು ನಿಜ ಜೀವನದಲ್ಲಿ ಕಂಡು ಬರುವ ವ್ಯಕ್ತಿಗಳನ್ನು ಪ್ರತಿಮಿಸುತ್ತವೆ. ನಿರೂಪಣೆಯಲ್ಲಿ ಕಸುವಿದೆ. ಚೆನ್ನಾಗಿ ಓದಿಸಿಕೊಂಡು ಹೋಗುತ್ತದೆ.



ಕೃತಿ – ಆಕೃತಿ
(ಸಾಹಿತ್ಯ - ಸಾಹಿತ್ಯೇತರ ಕೃತಿ ವಿವೇಚನೆಗಳು)
ಲೇ: ಪ್ರೊ॥ ಎಲ್.ಎಸ್. ಶೇಷಗಿರಿರಾವ್
ಪ್ರ: ವಸಂತ ಪ್ರಕಾಶನ, ತುಳಸಿ ತೋಟ, ಬೆಂಗಳೂರು - ೫೩
ಪ್ರ. ವರ್ಷ: ೨೦೦೫
ಪು: vii + 185, ಬೆಲೆ: ರೂ. ೧೦೦/-

ಈ ಕೃತಿಯಲ್ಲಿ ಕಥೆ, ಕಾದಂಬರಿ, ಕವಿತೆ, ನಾಟಕ, ಸಾಹಿತ್ಯ ವಿಮರ್ಶೆ, ವ್ಯಕ್ತಿ ಚಿತ್ರ, ವೈಚಾರಿಕ ಚಿಂತನೆ, ವೃತ್ತ ಪತ್ರಿಕೆ ಹಾಗೂ ವಿವಿಧ ರೀತಿಗಳಿಂದ ಹೋರಾಟದ ಬದುಕಿಗೆ ಸಂಬಂಧಿಸಿದ ೩೫(ಮೂವತ್ತೈದು) ವೈಚಾರಿಕ ಲೇಖನಗಳಿವೆ. ಕನ್ನಡ ಸಾಹಿತ್ಯ ಕ್ಷೇತ್ರದ ಶ್ರೇಷ್ಠ ವಿಮರ್ಶಕರಾದ ಪ್ರೊ॥ ಎಲ್.ಎಸ್.ಎಸ್.ರವರ ಲೇಖನಿಯಲ್ಲಿ ಈ ಮೌಲ್ಯಾಧಾರಿತ ಲೇಖನಗಳು ಬಹು ಆಕರ್ಷಕವಾಗಿ ಮೂಡಿಬಂದಿವೆ. ನಿರೂಪಣೆಯಲ್ಲಿ ಕಥೆಗಾರನ ಸೃಜನ ಶಕ್ತಿಯ ಜೊತೆಗೆ ಶ್ರೇಷ್ಠ ವಿಮರ್ಶಕನ ತೀಕ್ಷ್ಣ ವಿಚಾರಧಾರೆಯ ಕಾವನ್ನು ಅನುಭವಿಸುತ್ತೇವೆ. ಅವರ ಅನುಭವದ ಅಧ್ಯಯನಕ್ಕೆ ತಲೆಬಾಗುತ್ತೇವೆ. ಇದೊಂದು ಓದಲೇಬೇಕಾದ, ಸಂಗ್ರಹಯೋಗ್ಯ ಕೃತಿ ಎಂಬುದರಲ್ಲಿ ಸಂದೇಹಬಾರದು. ❑

ಗ್ರಂಥ ಸ್ವೀಕಾರ

'ಹಣವೇ ನಿನ್ನೆಯೆ ಗುಣ', 'ನಿದ್ರೆ'
'ಸಂಸಾರ', 'ತಾಂಬೂಲ'
ಲೇ: ಟಿ.ವಿ. ವೆಂಕಟರಮಣಯ, EWS ೨೧೮,
ಕೆ.ಎಚ್.ಬಿ. ಕಾಲೋನಿ, ೨ನೇ ಹಂತ, ೫ನೇ ಕ್ರಾಸ್,
ಬಸವೇಶ್ವರ ನಗರ, ಬೆಂಗಳೂರು - ೭೯
ಬೆಲೆ : ಕ್ರಮವಾಗಿ ೩೦/-, ೨೦/-, ೧೫/-, ಸದುಪಯೋಗ.

ಸೂಕ್ತಿಸಾಗರ : ಟಿ.ವಿ. ವೆಂಕಟರಮಣಯ್ಯ
ಲೇ: ವಿದ್ಯಾವಾಚಸ್ಪತಿ ಕವಿತಾಕೃಷ್ಣ
ಪ್ರ: ಕವಿತಾ ಪ್ರಕಾಶನ, ಕ್ಯಾತಸಂದ್ರ
ತುಮಕೂರು - ೫೭೨೧೦೪
ಪು: vi + 121, ಬೆಲೆ: ರೂ. ೬೦/-

ಪ್ರಥಮ (ಕವನ ಸಂಕಲನ)
ಲೇ: ಶ್ರೀಮತಿ ಅಮೃತ ಜಿ.
ಪು: xvi + 90, ಬೆಲೆ : ರೂ. ೭೦/-

ಕೂಲಿಯಿಂದ ಶಾಲೆಗೆ
ಲೇ: ಶ್ರೀಮತಿ ಅಮೃತ ಜಿ.
ಬೆಲೆ : ರೂ. ೫೦/- ಪುಟಗಳು xii + ೭೨

ಈ ಮೇಲಿನ ಎರಡು ಪುಸ್ತಕಗಳ ಪ್ರ:
ಅಮೃತ ಪ್ರಕಾಶನ, ನಂ. ೪೭, ೧೦ನೇ ಮುಖ್ಯರಸ್ತೆ
೧೬ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು - ೫೫

ಚಿಂತನೆಯ ತುಂತುರು
ಲೇ: ಜಿ.ಡಿ. ಊರ್ಮಿಳಾ
ಪ್ರ: ಸೌಜನ್ಯ ಪ್ರಕಾಶನ, ೯೨/೧
ಗವೀಪುರಂ ಬಡಾವಣೆ ಮುಖ್ಯರಸ್ತೆ
ಬೆಂಗಳೂರು - ೧೯
ಪು: viii + ೧೦೯, ಬೆಲೆ ರೂ. ೬೦/-

ಮುಜುಗರದ ಮಾತುಗಳು (ಕವಿತೆಗಳು)
ಲೇ: ಮೋಹನದಾಸ್ ದಾವಸ್ಕರ್
ಪ್ರ: ನಂ. ೩೦, ಬೆಳಕು ನಿವಾಸ, ೪ನೇ ಮುಖ್ಯರಸ್ತೆ,
ನರಸಿಂಹರಾಜ ಕಾಲೋನಿ, ಬೆಂಗಳೂರು - ೧೯
ಬೆಲೆ ೮೦/- ಪುಟಗಳು ೭೬.

ಬೆಳದಿಂಗಳು (ಕವನಗಳು)
ಲೇ: ಕೋಟೇಶ್ವರ ಸೂರ್ಯನಾರಾಯಣರಾವ್
ಪ್ರ: ಕೋಟೇಶ್ವರ ಸೂರ್ಯನಾರಾಯಣ
ರತ್ನ ಟ್ರಸ್ಟ್ (ರಿ.) ಮಹಾಲಕ್ಷ್ಮೀ ಕೃಪಾ
೨೫/೧, ಡಿ.ವಿ.ಜಿ. ರಸ್ತೆ, ಬೆಂಗಳೂರು - ೪
ಬೆಲೆ: ೩೦/- ಪುಟಗಳು: ೬೮.

ಮಕ್ಕಳು (ಹನಿಗವನ ಸಂಕಲನ)
ಲೇ: ಕೋಠಿ ರಂಗನಾಥರಾವ್
ಪ್ರ: ಗುರುರಾಜ ಪ್ರಕಾಶನ, 'ಹರಿಕೃಪ' ೨೩೬
೧೧ನೇ ಮುಖ್ಯರಸ್ತೆ, ಏಜಿಸ್ ಲೇಔಟ್, ಅರೇಹಳ್ಳಿ
ಸುಬ್ರಹ್ಮಣ್ಯಪುರ ಅಂಚೆ, ಬೆಂಗಳೂರು - ೬೧
ಪು: ೧೮೬, ಬೆಲೆ: ರೂ. ೬೦/-,

ಕನ್ನಡ ಕೈದೀವಿಗೆ (ಲೇಖನಗಳ ಕೈಪಿಡಿ)
ಲೇ: ರಾ.ನಂ. ಚಂದ್ರಶೇಕರ
ಪ್ರ: ಕನ್ನಡ ಗೆಳೆಯರ ಬಳಗ, ೬
ರಾಘವೇಂದ್ರ ಕಾಂಪ್ಲೆಕ್ಸ್, ೨ನೇ ತಿರುವು
ಸಿ.ಕೆ.ಸಿ. ಗಾರ್ಡನ್, ಬೆಂಗಳೂರು - ೨೭
ಪು: ೪೦, ಬೆಲೆ: ರೂ. ೧೦/-

ವ್ಯಾಸಭಾರತ ಭಿನ್ನ ವಿನ್ಯಾಸ
(ವೈಚಾರಿಕ ವಿಶ್ಲೇಷಣೆ)
ಲೇ: ಡಾ॥ ಆರ್.ಆರ್. ಪಾಂಗಾಳ
ಪ್ರ: ನಗಶಂಕರ ಪ್ರಕಾಶನ, ನಂ. ೨೧/೧
ನಾಗಲಕ್ಷ್ಮೀ ಶಂಕರನಾರಾಯಣ ನಿಲಯ
೩ನೇ ಕ್ರಾಸ್, ರಂಗರಾವ್ ರಸ್ತೆ, ಬಸವನಗುಡಿ,
ಬೆಂಗಳೂರು - ೫೬೦ ೦೦೪
ಮೊದಲ ಮುದ್ರಣ: ೨೦೦೫
ಬೆಲೆ: ರೂ. : ೫೭೫/-

ಅಭಿನವ ಚಾತುರ್ಮಾಸಿಕ
ಮೈಸೂರು ಮಹಾರಾಜ ಕಾಲೇಜು
ವಾರ್ಷಿಕ ಚಂದಾ ೨೦೦-೦೦ ರೂ.
ಸಂಸ್ಥೆಗಳಿಗೆ ೩೫೦-೦೦ ರೂ.

ಗಂಡೂರಿನ ಗರಿಮೆ
ಲೇ.: ದೇ.ಜ.ಗೌ.
ಪ್ರ: ಡಿ.ವಿ.ಕೆ. ಮೂರ್ತಿ
ಮೈಸೂರು - ೪
ಪ್ರಥಮ ಮುದ್ರಣ: ೨೦೦೬
ಬೆಲೆ : ರೂ. ೭೫/-

ಕನ್ನಡ ಕಷಾಯ
ಲೇ.: ಈಶ್ವರ ದೈತೋಟ
ಪ್ರ: ಕನ್ನಡ ಗೆಳೆಯರ ಬಳಗ. ನಂ. ೬
ರಾಘವ ಕಾಂಪ್ಲೆಕ್ಸ್, ೨ನೇ ತಿರುವು
ಸಿ.ಕೆ.ಸಿ. ಗಾರ್ಡನ್
ಬೆಂಗಳೂರು - ೫೬೦ ೦೨೭
ಮೊದಲ ಮುದ್ರಣ: ೨೦೦೬
ಬೆಲೆ: ರೂ. ೧೦/-

ಮುದ್ರಕರು : ಇಳಾ ಮುದ್ರಣ, ನಂ. ೩೬, ೪೦ ಅಡಿ ರಸ್ತೆ, ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು - ೨೬. ✆ : ೨೬೭೫೭೧೫೯